ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಡಾ || ಹೆಚ್.ಬಿ. ಪ್ರಭಾಕರ ಶಾಸ್ತ್ರಿ

ಶ್ರೀ ಬಿ. ರಮೇಶ್ ವಿರುದ್ಧ ಶ್ರೀಮತಿ ರಂಜನಾ ಮತ್ತು ಇನ್ನೊಬ್ಬರು

ಆರ್.ಪಿ.ಎಫ್.ಸಿ.ಸಂಖ್ಯೆ: 136/2013,ದಿನಾಂಕ: 18 ನೇ ಜನವರಿ, 2021

ಆಜ್ಞೆ

ನ್ಯಾಯಮೂರ್ತಿ ಡಾ || ಹೆಚ್.ಬಿ. ಪ್ರಭಾಕರ ಶಾಸ್ತ್ರಿ:

I ನೇ ಹೆಚ್ಚುವರಿ ಪ್ರಧಾನ ನ್ಯಾಯಾಧೀಶರು, ಕುಟುಂಬ ನ್ಯಾಯಾಲಯ, ಬೆಂಗಳೂರು (ಇನ್ನೂ ಮುಂದೆ ಸಂಕ್ಷಿಪ್ತವಾಗಿ " ಕುಟುಂಬ ನ್ಯಾಯಾಲಯ " ಎಂಬುದಾಗಿ ಉಲ್ಲೇಖಿಸಲಾಗಿದೆ) ಕ್ರಿಮಿನಲ್ ಮೊಕದ್ದಮೆಸಂಖ್ಯೆ: 381/2007 ರಲ್ಲಿ ಪ್ರತಿವಾದಿಯಾಗಿದ್ದ, ಪ್ರಸ್ತುತ ಅರ್ಜಿದಾರರು, ಸದರಿ ಕ್ರಿಮಿನಲ್ ಮೊಕದ್ದಮೆಸಂಖ್ಯೆ: 381/2007 ರಲ್ಲಿ ಕುಟುಂಬ ನ್ಯಾಯಾಲಯದಿಂದ 12/11/2013 ರಲ್ಲಿ ಹೊರಡಿಸಲಾದ ತೀರ್ಪನ್ನು ಪ್ರಶ್ನಿಸಿ, ಈ ಅರ್ಜಿಯನ್ನು ಸಲ್ಲಿಸಿದ್ದು, ಅದರಲ್ಲಿ ಈಗಿನ ಪ್ರತಿವಾದಿಗಳಾದಸಂಖ್ಯೆ: 1 ಮತ್ತು 2, ಅರ್ಜಿದಾರರಾಗಿದ್ದರು.ಕುಟುಂಬ ನ್ಯಾಯಾಲಯವು, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ, 1 ನೇ ಅರ್ಜಿದಾರರ ಜೀವನ ಪರ್ಯಂತ ಅಥವಾ ಅವರು ಪುನರ್ವಿವಾಹವಾಗುವವರೆಗೆ ಮತ್ತು 2 ನೇ ಅರ್ಜಿದಾರರು ಪ್ರಾಪ್ತ ವಯಸ್ಕರಾಗುವವರೆಗೆ, ಇದರ ಅರ್ಜಿದಾರರು (ಅದರಲ್ಲಿನ ಪ್ರತಿವಾದಿ) ಅರ್ಜಿದಾರರುಸಂಖ್ಯೆ: 1 ಮತ್ತು 2 ಇವರುಗಳಿಗೆ ಜೀವನಾಂಶವಾಗಿ ತಿಂಗಳೊಂದಕ್ಕೆ 10,000/-ಮೊತ್ತವನ್ನು ಸಂದಾಯ ಮಾಡಲು ಆದೇಶಿಸಿತ್ತು.

2. ಕುಟುಂಬ ನ್ಯಾಯಾಲಯದಲ್ಲಿನ ಅರ್ಜಿದಾರರ ಮೊಕದ್ದಮೆಯ ಸಾರಾಂಶವೇನೆಂದರೆ, ಇದರಲ್ಲಿ ಪ್ರತಿವಾದಿಸಂಖ್ಯೆ: 1 ಆಗಿರುವ ಅದರಲ್ಲಿನ ಅರ್ಜಿದಾರರಸಂಖ್ಯೆ: 1 ಇವರು ಪ್ರಸ್ತುತ ಅರ್ಜಿದಾರರ (ಪತಿ) ಪತ್ನಿಯಾಗಿದ್ದು, ಅವರು ಹಿಂದೂ ಸಂಪ್ರದಾಯ ಹಾಗೂ ಪದ್ಧತಿಗಳ ಪ್ರಕಾರದಿನಾಂಕ: 03/11/2000 ರಂದು ಮದುವೆ ಆಗಿದ್ದರು ಮತ್ತು ಅವರ ವಿವಾಹದಿಂದ 2 ನೇ ಅರ್ಜಿದಾರರು/ಮಗಳು (ಇದರಲ್ಲಿನ ಪ್ರತಿವಾದಿಸಂಖ್ಯೆ: 2)ದಿನಾಂಕ: 16/01/2004 ರಲ್ಲಿ ಜನಿಸಿದ್ದರು.ಅದರಲ್ಲಿನ ಪ್ರತಿವಾದಿ/ಪತಿ ಹಾಗೂ ಆತನ ತಂದೆ-ತಾಯಿಯವರ ಕೃತ್ಯದಿಂದ ಅರ್ಜಿದಾರರುಗಳನ್ನು (ಪತ್ನಿ ಮತ್ತು ಮಗಳು) ಮನೆಯಿಂದ ಹೊರಹಾಕಲಾಯಿತು ಹಾಗೂ ಅವರುಗಳ ನಡುವೆ ನಡೆದ ಹಲವಾರು ಇತ್ಯರ್ಥಗಳಲ್ಲಿ ಪ್ರತಿವಾದಿ/ಪತಿಯು ತನ್ನ ಪತ್ನಿ ಮತ್ತು ಮಗಳನ್ನು ನೋಡಿಕೊಳ್ಳುವುದಾಗಿ ಒಪ್ಪಿಕೊಂಡಿದ್ದರು.ಆದರೆ ಸ್ವಲ್ಪ ಸಮಯದ ನಂತರ ಹಿಂಸಿಸಲು ಹಾಗೂ ಪೀಡಿಸಲು ಪ್ರಾರಂಭಿಸುತ್ತಿದ್ದರು.ಹಾಗಾಗಿ ಇದರಲ್ಲಿ ಅ ಪ್ರತಿವಾದಿಗಳಾಗಿರುವ ಅರ್ಜಿದಾರರು (ಪತ್ನಿ ಹಾಗೂ ಮಗಳು) ಪ್ರತ್ಯೇಕವಾಗಿ ಜೀವಿಸುವುದು ಅನಿವಾರ್ಯವಾಯಿತು.ಕುಟುಂಬ ನ್ಯಾಯಾಲಯದಲ್ಲಿನ ಅರ್ಜಿದಾರರುಗಳು (ಪತ್ನಿ ಮತ್ತು ಮಗಳು ಮುಂದುವರೆದು ವಾದಿಸುವುದೇನೆಂದರೆ, 0 ಪ್ರತಿವಾದಿ/ಪತಿಯು ಅವರು ಅರ್ಜಿಯನ್ನು ಸಲ್ಲಿಸುವಾಗ ಮೆ || ಬಿ.ಎಲ್. ಕಾಶ್ಯಪ್ ಅಂಡ್ ಸನ್ಸ್ ಪ್ರೈವೇಟ್ ಲಿಮಿಟೆಡ್, ಇಂದಿರಾನಗರ, ಬೆಂಗಳೂರು ಇಲ್ಲಿ ಕೆಲಸ ಮಾಡುತ್ತಿದ್ದರು ಹಾಗೂ ತಿಂಗಳಿಗೆ ಒಟ್ಟು ರೂ .31,000/-ಸಂಬಳ ಪಡೆಯುತ್ತಿದ್ದರು ಹಾಗೂ ಬೋನಸ್ ಆಗಿ ರೂ .35,000/-ರಷ್ಟು ಹಣ ಪಡೆಯುತ್ತಿದ್ದರು.ಸಾಕಷ್ಟು ಆದಾಯವಿದ್ದರೂ ಸಹ, ಪ್ರತಿವಾದಿ (ಪತಿ) ಕುಟುಂಬ ನಿರ್ವಹಣೆ ಮಾಡುತ್ತಿರಲಿಲ್ಲ ಹಾಗೂ ಅರ್ಜಿದಾರರಿಗೆ (ಪತ್ನಿ ಮತ್ತು ಮಗಳು) ಮಾನಸಿಕ ಹಾಗೂ ದೈಹಿಕ ಹಿಂಸೆ ನೀಡುತ್ತಿದ್ದರು ಎಂದು ಹೇಳುತ್ತಾ, 1 ನೇ ಅರ್ಜಿದಾರರು ತಿಂಗಳಿಗೆ 12,000/ ರೂಪಾಯಿಗಳಿಗಿಂತಲೂ ಕಡಿಮೆ ಇಲ್ಲದ ಮೊತ್ತದ ಜೀವನಾಂಶ ನೀಡಲು ಕೋರಿರುತ್ತಾರೆ.

ನೋಟೀಸು ಜಾರಿಯಾದ ನಂತರ, ಪತಿಯು (ಕುಟುಂಬ ನ್ಯಾಯಾಲಯದಲ್ಲಿ ಪ್ರತಿವಾದಿ) ವಕೀಲರ ಮೂಲಕ ಹಾಜರಾಗಿ ಆಕ್ಷೇಪಣಾ ಹೇಳಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಅವರು ಅರ್ಜಿದಾರರುಸಂಖ್ಯೆ: 01 ಇವರೊಂದಿಗೆ ತಮ್ಮ ಮದುವೆಯಾಗಿದ್ದನ್ನು ಹಾಗೂ ಅವರಿಬ್ಬರಿಗೂ 2 ನೇ ಅರ್ಜಿದಾರರು ಅವರ ಮಗಳಾಗಿ ಹುಟ್ಟಿದ್ದನ್ನು ಒಪ್ಪಿರುತ್ತಾರೆ.ಆದರೆ ಯಾವುದೇ ಸಂದರ್ಭದಲ್ಲೂ ಅರ್ಜಿದಾರಸಂಖ್ಯೆ: 1 ಮತ್ತು 2 ರನ್ನು (ಪತ್ನಿ ಮತ್ತು ಮಗಳನ್ನು ಹೊರಹಾಕಿದ್ದಾರೆಂಬುದನ್ನು ಮತ್ತು ಅವರನ್ನು ನಿರ್ಲಕ್ಷಿಸಿದ್ದೇನೆಂಬುದನ್ನು ಅಲ್ಲಗಳೆದಿದ್ದಾರೆ. ತಮ್ಮ ಆಕ್ಷೇಪಣೆಗಳ ಹೇಳಿಕೆಯಲ್ಲಿ ಪ್ರತಿವಾದಿಯವರು (ಪತಿ) ಸ್ಥಿರ ವಸತಿ ಸ್ವತ್ತನ್ನು ಅವರು ತಮ್ಮ ಹಾಗೂ 1 ನೇ ಅರ್ಜಿದಾರರ ಅಂದರೆ ತನ್ನ ಪತ್ನಿಯ ಜಂಟಿ ಹೆಸರಿನಲ್ಲಿ ಕೊಂಡುಕೊಂಡುದ್ದಾಗಿಯೂ, ಅದರಲ್ಲಿ ವಾಸವಾಗಿರುವ ಅರ್ಜಿದಾರರು ಸದರಿ ಸ್ವತ್ತಿನ ಏಕೈಕ ಫಲಾನುಭವಿಗಳೆಂದು ತಿಳಿಸಿದ್ದಾರೆ.

ಉಭಯ ಪಕ್ಷಕಾರರೂ ಕುಟುಂಬ ನ್ಯಾಯಾಲಯದಲ್ಲಿ ತಮ್ಮ ಸಾಕ್ಷ ಎ ನೀಡಿದರು.ಅದರಲ್ಲಿ ಅರ್ಜಿದಾರರಸಂಖ್ಯೆ: 1 (ಪತ್ನಿ) ತಮ್ಮನ್ನು ಪ್ರಾ.ಸಾ.!ಆಗಿ ವಿಚಾರಣೆಗೆ ಒಳಗಾದರು ಮತ್ತು ಪ್ರಾ.ಸಾ .1 ರಿಂದ ಪಿ .76 ನ್ನು ಎಂದು ಗುರುತು ಮಾಡಲಾಯಿತು ಮತ್ತು ಪ್ರತಿವಾದಿ (ಪತಿ) ಪ್ರಾ.ಸಾ .1 ಆಗಿ ವಿಚಾರಣೆಗೆ ಒಳಗಾದರು.ಪ್ರ .1 ರಿಂದ 15 ನ್ನು ಗುರುತು ಮಾಡಲಾಯಿತು.

ಉಭಯ ಪಕ್ಷಕಾರರ ವಾದಗಳನ್ನು ಆಲಿಸಿದ ನಂತರ, ಕುಟುಂಬ ನ್ಯಾಯಾಲಯವು ತನ್ನ 12/11/2013 ನೇ ದಿನಾಂಕದ ತೀರ್ಪಿನ ಮೂಲಕ ತನ್ನ ಮುಂದೆ 1 ಮತ್ತು 2 ನೇ ಅರ್ಜಿದಾರರು (ಪತ್ನಿ ಮತ್ತು ಮಗಳು) ಸಲ್ಲಿಸಿದ ಅರ್ಜಿಯನ್ನು ಭಾಗಶಃ ಪುರಸ್ಕರಿಸಿದರು ಹಾಗೂ ಜೀವನಾಂಶವಾಗಿ ಅವರಿಗೆ ತಿಂಗಳಿಗೆ ರೂ .10,000/-ಮೊತ್ತ ನೀಡುವಂತೆ ಪ್ರತಿವಾದಿಗೆ (ಪತಿಗೆ) ನಿರ್ದೇಶಿಸಿದರು. ಸದರಿ ತೀರ್ಪನ್ನು ಪ್ರಶ್ನಿಸಿ, ಕುಟುಂಬ ನ್ಯಾಯಾಲಯದಲ್ಲಿ ಪ್ರತಿವಾದಿಯು (ಪತಿ) ಈ ಪರಿಷ್ಕರಣಾ ಅರ್ಜಿಯನ್ನು ಸಲ್ಲಿಸಿದ್ದಾರೆ.

3. ಇದರಲ್ಲಿನ ಪ್ರತಿವಾದಿಸಂಖ್ಯೆ: 1 ಮತ್ತು 2 ನ್ನು (ಪತ್ನಿ ಮತ್ತು ಮಗಳು) ಅವರ ವಕೀಲರನ್ನು ಪ್ರತಿನಿಧಿಸಿರುತ್ತಾರೆ.

4. ಕುಟುಂಬ ನ್ಯಾಯಾಲಯದ ದಾಖಲೆಯನ್ನು ತರಿಸಿಕೊಳ್ಳಲಾಯಿತು ಮತ್ತು ಅದನ್ನು ಈ ನ್ಯಾಯಾಲಯದ ಮುಂದೆ ಇರಿಸಲಾಯಿತು.

5. ಉಭಯ ಪಕ್ಷಗಳ ವಕೀಲರು ನ್ಯಾಯಾಲಯದ ಮುಂದೆ ಖುದ್ದು ಹಾಜರಾಗಿದ್ದಾರೆ.

6. ಐ.ಎ.ಸಂಖ್ಯೆ:1/2013 ರಲ್ಲಿ ಸುನಾವಣೆ ಮಾಡಲು ಈ ವಿಷಯವನ್ನು ಪಟ್ಟಿಯಲ್ಲಿ ಸೇರಿಸಲಾಗಿದ್ದರೂ ಸಹ, ಎರಡೂ ಕಡೆಯವರ ಸಮ್ಮತಿಯಿಂದ ಮುಖ್ಯ ವಿಷಯದ ಮೇಲೆ ವಾದ-ವಿವಾದಗಳನ್ನು ಕೇಳಲಾಯಿತು.

7. ಕುಟುಂಬ ನ್ಯಾಯಾಲಯದ ದಾಖಲೆಗಳು ಹಾಗೂ ಪ್ರಶ್ನಿತ ತೀರ್ಪು ಸೇರಿದಂತೆ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.ನನ್ನ ಪರಿಗಣನೆಗೆ ಬಂದಂತಹ ಒಂದೇ ಒಂದು ಅಂಶವೇನೆಂದರೆ,

" ಕುಟುಂಬ ನ್ಯಾಯಾಲಯದಿಂದ ಹೊರಡಿಸಲಾದ ಪ್ರಶ್ನಿತ ತೀರ್ಪು, ಈ ನ್ಯಾಯಾಲಯದಿಂದ ಮಧ್ಯಪ್ರವೇಶಿಸುವಿಕೆಯ ಅವಶ್ಯಕತೆ ಇರುವ ಯಾವುದೇ ವಿಕೃತತೆ, ಕಾನೂನು ಬಾಹಿರತೆ ಅಥವಾ ಅಕ್ರಮದಿಂದ ಘಾಸಿ ಹೊಂದಿದೆಯೇ?

8. ಅರ್ಜಿದಾರರ (ಪತಿ) ಪರ ವಕೀಲರು ಅರ್ಜಿದಾರರ (ಪತಿ) ಹಾಗೂ ಇದರಲ್ಲಿನ 1 ನೇ ಪ್ರತಿವಾದಿಯ (ಪತ್ನಿ) ನಡುವಿನ ವೈವಾಹಿಕ ಸಂಬಂಧ ಹಾಗೂ ಅವರ ವಿವಾಹದಿಂದ ಈಗಿನ ಪ್ರತಿವಾದಿಸಂಖ್ಯೆ: 2 (ಮಗಳು) ಜನಿಸಿರುವುದು ಸಹ ಒಪ್ಪಿತ ಅಂಶವೆಂಬುದಾಗಿ ನಿವೇದಿಸಿಕೊಂಡಿದ್ದಾರೆ.ವಕೀಲರು ಮುಖ್ಯವಾಗಿ 1 ನೇ ಪ್ರತಿವಾದಿಯ (ಪತ್ನಿ) ಕೆಲಸ ಮಾಡಿ ತನ್ನ ಜೀವನೋಪಾಯ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿರುವವರಾಗಿದ್ದಾರೆ.ಹಾಗಾಗಿ ಈಗಿನ ಅರ್ಜಿದಾರರು ಸಂದಾಯ ಮಾಡಬಹುದಾದ ಜೀವನಾಂಶಕ್ಕೆ ಆಕೆಯು ಹಕ್ಕುಳ್ಳವಳಾಗಿರುವುದಿಲ್ಲ ಎಂಬ ವಾದದ ಮುಖ್ಯ ಅಂಶಕ್ಕೆ ಮಾತ್ರ ಒತ್ತು ನೀಡಿದ್ದಾರೆ.ಆಕೆಯು ಕೆಲಸವನ್ನು ಬಿಡಬಾರದಾಗಿತ್ತು ಮತ್ತು ಆಕೆಯು ಪತಿಗೆ (ಅರ್ಜಿದಾರ) ಹಿಂಸೆ ಕೊಡುವುದಕ್ಕಾಗಿಯೇ ತನ್ನ ಕೆಲಸಕ್ಕೆ ರಾಜಿನಾಮೆ ನೀಡಿ ಆಕೆಯ ಪತಿಯು ಜೀವನಾಂಶ ನೀಡುವಂತೆ ಬಲವಂತ ಮಾಡುತ್ತಿದ್ದಾಳೆ.ಹಾಗಾಗಿ ಅರ್ಜಿದಾರರು (ಪತಿ) ಆಕೆಗೆ ಯಾವುದೇ ಜೀವನಾಂಶ ನೀಡಲು ಹೊಣೆಗಾರರಾಗಿರುವುದಿಲ್ಲ.ತಮ್ಮ ನಿವೇದನೆಗೆ ಬೆಂಬಲವಾಗಿ, ಮಾನ್ಯ ವಕೀಲರು, ಇದರಲ್ಲಿ ವರದಿಯಾದ ದಮನ್ಪ್ರೀತ್ ಕೌರ್ -ವಿರುದ್ಧ ಇಂದಮೀರ್ತ್ ಜುನೇಜಾ ಮತ್ತು ಮತ್ತೊಬ್ಬರು 2013 ( 1) ಕ್ರೈಮ್ಸ್ 650 (ದೆ) ಮೊಕದ್ದಮೆಯಲ್ಲಿ ದೆಹಲಿ ಉಚ್ಚ ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿದ್ದಾರೆ.

ಮಾನ್ಯ ವಕೀಲರು ಮುಂದುವರೆದು ನಿವೇದಿಸಿಕೊಳ್ಳುವುದೇನೆಂದರೆ, ಅರ್ಜಿದಾರರು (ಪತಿ) ಯಾವುದೇ ಖಾಸಗಿಯಲ್ಲಾಗಲೀ ಅಥವಾ ಸಾರ್ವಜನಿಕ ಸಂಸ್ಥೆಯಲ್ಲಾಗಲೀ ಕೆಲಸ ಮಾಡುವ ಮೂಲಕ ಯಾವುದೇ ಸಂಬಳ ಗಳಿಸುತ್ತಿಲ್ಲ.ಅವರು ವಕೀಲ ವೃತ್ತಿಯನ್ನು ನಡೆಸುತ್ತಿದ್ದರೂ ಸಹಾ, ಅವರಿಗೆ ಯಾವುದೇ ಯುಕ್ತ ಆದಾಯವಿಲ್ಲ.ಹಾಗಾಗಿ ಅವರು ತನ್ನ ಪತ್ನಿಗೆ ಜೀವನಾಂಶ ನೀಡಲು ಆಗುವುದಿಲ್ಲ.ಆದರೆ ಮುಂದುವರೆದು ವಕೀಲರು ನಿವೇದಿಸುವುದೇನೆಂದರೆ ಅಂತಹ ತೊಂದರೆ ತಾಪತ್ರಯಗಳಿದ್ದರೂ ಸಹಾ ಅರ್ಜಿದಾರರು (ಪತಿ) ತನ್ನ ಮಗಳಾದ 2 ನೇ ಪ್ರತಿವಾದಿಯನ್ನು ಸಾಕಲು ಸಿದ್ಧರಿದ್ದಾರೆ.ವಕೀಲರು ತಮ್ಮ ವಾದವನ್ನು ಮುಕ್ತಾಯಗೊಳಿಸುತ್ತಾ ತನ್ನ ಅರ್ಜಿ ವಿವರಣ ಪತ್ರದ ಕಂಡಿಕೆಸಂಖ್ಯೆ: 4 ರ ಕಡೆ ಈ ನ್ಯಾಯಾಲಯದ ಗಮನ ಸೆಳೆಯುತ್ತಾ, 1 ನೇ ಪ್ರತಿವಾದಿಯು (ಪತ್ನಿ) ಅರ್ಜಿದಾರರ (ಪತಿಯ) ವಿರುದ್ಧ ಹಲವಾರು ಸುಳ್ಳು ಕೇಸುಗಳನ್ನು ಹಾಕಿ, ತಮ್ಮ ನಡವಳಿಕೆಯನ್ನು ತೋರಿಸಿಕೊಂಡಿದ್ದಾರೆ ಮತ್ತು ಅಂತಹ ವರ್ತನೆಯು, ತನ್ನ ಪತಿಯಿಂದಲೂ ಯಾವುದೇ ಜೀವನಾ ೦ ಶ ಪಡೆಯಲು ಅರ್ಹವಾಗುವುದಿಲ್ಲ ಎಂದು ನಿವೇದಿಸಿಕೊಂಡಿದ್ದಾರೆ.

9. ಇದಕ್ಕೆ ವಿರುದ್ಧವಾಗಿ, 1 ನೇ ಪ್ರತಿವಾದಿಯ (ಪತ್ನಿ) ಪರ ವಕೀಲರು ತಮ್ಮ ವಾದದಲ್ಲಿ, ಆರೋಪಿತ ' ವರ್ತನೆಯು ' ಪತ್ನಿಯ ವಿರುದ್ಧವಲ್ಲ.ಅದು ಪ್ರಸ್ತುತ ಅರ್ಜಿದಾರರೇ (ಪತಿ) ಆಗಿರುತ್ತಾರೆ.ಪ್ರಸ್ತುತದ ಅರ್ಜಿದಾರರ (ಪತಿಯ) ವರ್ತನೆಯಿಂದ ಅವರ ವಿರುದ್ಧ ಆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿದ್ದು, ಅದಕ್ಕೆ 1 ನೇ ಪ್ರತಿವಾದಿಯನ್ನು (ಪತ್ನಿ) ದೂಷಿಸುವುದು ಸರಿಯಲ್ಲ ಎಂದು ನಿವೇದಿಸಿಕೊಂಡಿದ್ದಾರೆ.ಮುಂದುವರೆದು, ವಕೀಲರು ನಿವೇದಿಸಿಕೊಳ್ಳುವುದೇನೆಂದರೆ, ಕುಟುಂಬ ನ್ಯಾಯಾಲಯದಲ್ಲಿ ಪಾಟಿ ಸವಾಲಿನ ದಿನಾಂಕದಂದು ಇರುವಂತೆ ಅವರು ಖಾಸಗಿ ಸಂಸ್ಥೆ ಅಂದರೆ, ಮೆ || ಭಂಡಾರಿ ಇನ್ಫ್ರಾ ಪ್ರಾಜೆಕ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನಲ್ಲಿ ಕೆಲಸ ಮಾಡುತ್ತಿದ್ದರು ಮತ್ತು ಮಾಸಿಕ 28,000/ರೂಪಾಯಿಗಳಿಗೆ ಕಡಿಮೆ ಇಲ್ಲದಷ್ಟು ಸಂಬಳ ಪಡೆಯುತ್ತಿದ್ದರೆಂದು ಒಪ್ಪಿಕೊಂಡಿದ್ದಾರೆ.ಮುಂದುವರೆದು ವಕೀಲರು ಹೇಳುವುದೇನೆಂದರೆ, ಅರ್ಜಿದಾರರು (ಪತಿ) ರುಚಿಕ ಡೆವಲಪರ್ ಎಂಬ ಹೆಸರಿನಲ್ಲಿ ಒಂದು ಖಾಸಗಿ ಕಂಪನಿಯನ್ನು ನಡೆಸುತ್ತಿದ್ದಾರೆ ಮತ್ತು ಇದರ ಜೊತೆಗೆ ಅವರು ಮನೆ ಸ್ವತ್ತನ್ನು ಮತ್ತು ಕೃಷಿ ಸ್ವತ್ತನ್ನು ಹೊಂದಿದ್ದು, ಅವು ಅವರ ತಂದೆಯ ಹೆಸರಿನಲ್ಲಿವೆ.ವಕೀಲರು ನಿವೇದಿಸುವುದೇನೆಂದರೆ ಪ್ರಸ್ತುತದ ಪ್ರತಿವಾದಿಸಂಖ್ಯೆ: 1 (ಪತ್ನಿ) ವಿದ್ಯಾವಂತ ಮಹಿಳೆ

ಹಾಗೂ ಆಕೆಯ ಶೈಕ್ಷಣಿಕ ವಿದ್ಯಾರ್ಹತೆಯು ಡಿಪ್ಲೊಮೊ ಇನ್ ಕಮರ್ಷಿಯಲ್ ಪ್ರಾಕ್ಟೀಸ್.ಆದರೆ, ದೃಷ್ಟಿದೋಷದಿಂದ (ಕಣ್ಣಿನ ಸಮಸ್ಯೆಯಿಂದ) ಬಳಲುತ್ತಿದ್ದ ತನ್ನ ಅಪ್ರಾಪ್ತ ವಯಸ್ಕ ಮಗಳನ್ನು ನೋಡಿಕೊಳ್ಳುವುದಕ್ಕಾಗಿಯೇ ಕೆಲಸಕ್ಕೆ ರಾಜೀನಾಮೆ ನೀಡಿದ್ದು, ಅದಕ್ಕೆ ಸಾಕ್ಷ್ಯ ಎಂ ನಿಶಾನೆ ಪಿ .45 ರಲ್ಲಿ ಇದೆ. ಮುಂದುವರೆಸುತ್ತಾ ವಕೀಲರು, ಪತ್ನಿಯು ಆದಾಯಗಳಿಸುವ ಸಾಮರ್ಥ್ಯ ಹೊಂದಿದ್ದಾಳೆಂಬ ಒಂದೇ ಕಾರಣಕ್ಕಾಗಿ, ಆಕೆ ತನ್ನ ಪತಿಯಿಂದ ಜೀವನಾಂಶಕ್ಕೆ ಹಕ್ಕುಳ್ಳವಳಾಗಿಲ್ಲವೆಂದು ಹೇಳಲಾಗದು ಎಂದು ವಾದಿಸುತ್ತಾ, ಇದರಲ್ಲಿ ವರದಿಯಾದ ಶೈಲಜಾ ಮತ್ತು ಮತ್ತೊಬ್ಬರು ವಿರುದ್ಧ ಖೋಬಣ್ಣಾ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪು ಹಾಗೂ ನಿರ್ಣಯಿಸಲಾದ ರಮೇಶ್ -ವಿರುದ್ಧ-ಲಕ್ಷ್ಮೀ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಸಮನ್ವಯ ಪೀಠದ ವರದಿಯಾಗದ ತೀರ್ಪಿನ ಮೇಲೆ ಅವಲಂಬಿಸಿದ್ದಾರೆ.

10. ಒಪ್ಪಿಕೊಂಡಿರುವಂತೆ, ಪ್ರಸ್ತುತ ಪ್ರತಿವಾದಿಸಂಖ್ಯೆ: 1, ಪ್ರಸ್ತುತ ಅರ್ಜಿದಾರರ ಪತ್ನಿ ಹಾಗೂ ಪ್ರಸ್ತುತ ಪ್ರತಿವಾದಿಸಂಖ್ಯೆ: 2 ಅವರ ವಿವಾಹದಿಂದ ಅವರಿಗೆ ಜನಿಸಿದ ಮಗಳು. ಪ್ರಸ್ತುತ ಪ್ರತಿವಾದಿಸಂಖ್ಯೆ: 1 ಮತ್ತು 2 (ಪತ್ನಿ ಮತ್ತು ಮಗಳು). ಪ್ರಸ್ತುತ ಪ್ರತಿವಾದಿಸಂಖ್ಯೆ: 1 ರ ಪತಿಯಾಗಿರುವ ಹಾಗೆಯೇ ಪ್ರತಿವಾದಿಸಂಖ್ಯೆ: 2 ರ ತಂದೆಯಾಗಿರುವ ಪ್ರಸ್ತುತದ ಅರ್ಜಿದಾರರಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆಂಬುದರ ಬಗ್ಗೆ ವಿವಾದವಿಲ್ಲ.ಆದರೆ, ಆಕೆಯು ತನ್ನ ೧ ಜೀವನೋಪಾಯಕ್ಕೆ ಗಳಿಸಲು ಶಕ್ತಳಾಗಿದ್ದಾಳೆಂಬ ಕಾರಣಕ್ಕಾಗಿಯೇ ಆಕೆ ಪತಿಯಿಂದ ಯಾವುದೇ ಜೀವನಾಂಶವನ್ನು ಕ್ಲೇಮು ಮಾಡುವ ಆಕೆಯ ಹಕ್ಕನ್ನು ಪ್ರಶ್ನಿಸುತ್ತಾನೆ ಹಾಗೂ ಈ ಪರಿಷ್ಕರಣಾ ಅರ್ಜಿಯಲ್ಲಿ ಅವರ ವಾದದ ಪ್ರಮುಖ ಅಂಶವೇ ಆದಾಗಿದೆ.ಹಾಗಾಗಿ ಪತ್ನಿ (ಇಲ್ಲಿನ ಪ್ರತಿವಾದಿಸಂಖ್ಯೆ: 1) ಪ್ರತ್ಯೇಕವಾಗಿ ವಾಸಿಸುತ್ತಿದ್ದಾಳೆಂಬ ಕಾರಣದ ಬಗ್ಗೆ ಕುಟುಂಬ ನ್ಯಾಯಾಲಯದ ತೀರ್ಪನ್ನು ಈ ಪರಿಷ್ಕರಣಾ ಅರ್ಜಿಯಲ್ಲಿ ಪುನರ್ವಿಮರ್ಶಿಸುವ ಅಗತ್ಯತೆ ಇಲ್ಲ. ಆಕೆಯು ತಾನಾಗಿಯೇ ಜೀವನೋಪಾಯ ಗಳಿಸುವ ಸಾಮರ್ಥ್ಯ ಹೊಂದಿದ್ದಾಳೆಂದು ಆರೋಪಿಸಿರುವಾಗ, ಸದರಿ ಪತ್ನಿ (ಪ್ರತಿವಾದಿಸಂಖ್ಯೆ: 1) ಜೀವನಾಂಶಕ್ಕೆ ಅರ್ಹಳಾಗಿದ್ದಾಳೆಯೇ ಎಂಬುದನ್ನು ವಿಶ್ಲೇಷಿಸಿದರೆ ಸಾಕಾಗುತ್ತದೆ.

11. ಅರ್ಜಿದಾರರ (ಪತಿಯ) ವಕೀಲರು ನಿಶಾನೆ ಪಿ .74 ರ ಕಡೆ ಈ ನ್ಯಾಯಾಲಯದ ಗಮನ ಸೆಳೆದಿದ್ದು, ಅದು ಮೆ || ಗರುಡ ಆಟೋ ಕ್ರಾಫ್ಟ್ ಪ್ರೈವೇಟ್ ಲಿಮಿಟೆಡ್ನಿಂದ ಪ್ರಸ್ತುತದ ಪ್ರತಿವಾದಿಸಂಖ್ಯೆ: 1 (ಪತ್ನಿ) ಇವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಿ ನೀಡಲಾದ ಪತ್ರವೆಂದು ತೋರಿಸಲಾಗಿದೆ.ಸದರಿ ದಸ್ತಾವೇಜು, ಆರೋಪಿಸಲಾದ ಪ್ರಸ್ತುತ ಪ್ರತಿವಾದಿಸಂಖ್ಯೆ: 1 ರ ಉದ್ಯೋಗದಾತರು, ಪ್ರಸ್ತುತ ಪ್ರತಿವಾದಿಸಂಖ್ಯೆ: (ಪತ್ನಿ) ಆ ಸಂಸ್ಥೆಗೆದಿನಾಂಕ: 22/02/2010 ರಂದು ಸಲ್ಲಿಸಲಾದ ರಾಜೀನಾಮೆ ಪತ್ರವನ್ನು ಅಂಗೀಕರಿಸಲಾಗಿದೆಯೆಂದೂ ಮತ್ತು ಅವರು ಆಕೆಯನ್ನು ಸೇಲ್ಸ್ ಕೋ ಆರ್ಡಿನೇಟರ್ ಉದ್ಯೋಗದಿಂದ ಬಿಡುಗಡೆ ಮಾಡಿದರೆಂದು ಮತ್ತುದಿನಾಂಕ: 06/03/2010 ರ ಅಪರಾಹ್ನ 6.30 ಕ್ಕೆ ಬಿಡುಗಡೆ ಮಾಡಿದ್ದಾರೆ ಎಂದು ತೋರಿಸುತ್ತದೆ.ಕುಟುಂಬ ನ್ಯಾಯಾಲಯದಲ್ಲಿ ಜೀವನಾಂಶಕ್ಕಾಗಿ ಪತ್ನಿಯು ಅರ್ಜಿ ಹಾಕಿದ ದಿನಾಂಕದ ನಂತರದ್ದಾದ ಈ ದಸ್ತಾವೇಜು ನಿಶಾನೆ ಪಿ -74 ನ್ನು ಅವಲಂಬಿಸಿ, ಅರ್ಜಿದಾರರ (ಪತಿಯು) ಪರ ವಕೀಲರು ವಾದಿಸುವುದೇನೆಂದರೆ, ಆಕೆಯು ತನ್ನ ಉದ್ಯೋಗಕ್ಕೆ ರಾಜೀನಾಮೆ ನೀಡಿರುವ ಪ್ರತಿವಾದಿಸಂಖ್ಯೆ: 1 (ಪತ್ನಿಯು) ಸದರಿ ಕೆಲಸವು, ಆಕೆಯ ಪತಿಯಿಂದ (ಪ್ರಸ್ತುತದ ಅರ್ಜಿದಾರರಿಂದ) ಜೀವನಾಂಶವಾಗಿ ಹಣವನ್ನು ವಸೂಲು ಮಾಡುವುದಕ್ಕಾಗಿಯೇ ಯೋಚಿಸಿ ತೆಗೆದುಕೊಂಡ ನಿರ್ಧಾರ ಮಾತ್ರವಾಗಿರುತ್ತದೆ.ಆ ಸಂಬಂಧವಾಗಿ ಅರ್ಜಿದಾರರ (ಪತಿಯ) ವಕೀಲರು ದಮನ್ಪ್ರೀತ್ ಕೌರ್ (ಮೇಲಿನ) ಮೊಕದ್ದಮೆಯಲ್ಲಿ ದೆಹಲಿ ಉಚ್ಚ ನ್ಯಾಯಾಲಯದ ತೀರ್ಪಿನ ಮೇಲೆ

ಅವಲಂಬಿಸಿದ್ದು, ಅದರಲ್ಲಿ ಚ ದೆಹಲಿ ಉಚ್ಚ ನ್ಯಾಯಾಲಯದ ಮಾನ್ಯ ಏಕ ನ್ಯಾಯಮೂರ್ತಿಯವರು ಇದರಲ್ಲಿ ವರದಿಯಾದ ಶ್ರೀಮತಿ ಮಮ್ರಾ ಜೈಸ್ವಾಲ್ -ವಿರುದ್ಧ ರಾಜೇಶ್ ಜೈಸ್ವಾಲ್ ಮೊಕದ್ದಮೆಯಲ್ಲಿ ಮಧ್ಯಪ್ರದೇಶದ ಉಚ್ಚ ನ್ಯಾಯಾಲಯದ ತೀರ್ಪನ್ನು ಅವಲಂಬಿಸಿ, ಆಕೆಯು ಕೆಲಸ ಮಾಡಲು ಸಾಮರ್ಥ್ಯ ಹೊಂದಿದ್ದು, ತನಗೆ ಸೂಕ್ತವಾದ ಉದ್ಯೋಗ ಕಂಡುಕೊಳ್ಳುವ ಸಾಮರ್ಥ್ಯವಿದ್ದರೂ ಆಕೆಯು ರೂ .50,000/- ಗಳಿಸುವ ತುಂಬಾ ವಿದ್ಯಾವಂತ ಮಹಿಳೆಯಾಗಿದ್ದು, ತಾನಾಗಿಯೇ ಕೆಲಸ ಮಾಡದಿರಲು ಆಯ್ಕೆ ಮಾಡಿಕೊಂಡಿದ್ದು, ಪತ್ನಿಗೆ ತಾತ್ಕಾಲಿಕ ಹಣದ ಪರಿಹಾರ ನೀಡಲು ನಿರಾಕರಿಸಿ ಹೆಚ್ಚುವರಿ ಸತ್ರ ನ್ಯಾಯಾಧೀಶರಿಂದ ಮಾಡಲಾದ ಆದೇಶದಲ್ಲಿ ತಾನು ಮಧ್ಯಪ್ರವೇಶಿಸುವ ಅವಶ್ಯಕತೆಯಿಲ್ಲವೆಂದು ನಿರ್ಣಯಿಸಿತು.ಏಕೆಂದರೆ ತುಂಬಾ ವಿದ್ಯಾವಂತರಾದ ದಂಪತಿಯು, ತಮ್ಮ ಜೀವನೋಪಾಯಕ್ಕೆ ಸಂಪನ್ಮೂಲ ಕಂಡುಕೊಳ್ಳುವ ಉದ್ದೇಶಕ್ಕೆ ಯಾವುದೇ ಪ್ರಯತ್ನಗಳನ್ನು ಮಾಡದೆ, ಸೋಮಾರಿಯಾಗಿ ಉಳಿಯಲು ಇಚ್ಛಿಸುವುದನ್ನು ಪ್ರೋತ್ಸಾಹಿಸಬಾರದು ಎಂದು ಅಭಿಪ್ರಾಯಪಟ್ಟಿರುತ್ತದೆ.

12. ಇದರಲ್ಲಿ ಪ್ರತಿವಾದಿಸಂಖ್ಯೆ: 1 ಮತ್ತು 2 ರ ವಕೀಲರು ಶೈಲಜಾ ಮೊಕದ್ದಮೆಯನ್ನು (ಮೇಲಿನ) ಅವಲಂಬಿಸಿದ್ದು, ಅದರಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪತ್ನಿಯು ಗಳಿಸುವ ಸಾಮರ್ಥ್ಯ ಹೊಂದಿದ್ದಾಳೆಂಬ ಒಂದೇ ಕಾರಣದಲ್ಲಿ ಜೀವನಾಂಶವನ್ನು ಕಡಿತಗೊಳಿಸುವುದು ಅಂತಹ ಜೀವನಾಂಶದ ಕಡಿತಗೊಳಿಸುವುದಕ್ಕೆ ಸಮರ್ಪಕ ಕಾರಣವಾಗುವುದಿಲ್ಲ ಎಂಬುದಾಗಿ ಅಭಿಪ್ರಾಯ ವ್ಯಕ್ತಪಡಿಸಿದೆ.

13. ಕುಟುಂಬ ನ್ಯಾಯಾಲಯದಲ್ಲಿ ಪ್ರಸ್ತುತದ ಪ್ರತಿವಾದಿಗಳು ಹಾಗೂ ಒಪ್ಪಿಕೊಂಡಿರುವಂತೆ ಅದರಲ್ಲಿನ ಪ್ರತಿವಾದಿಯ ಪತ್ನಿಯು, ದಂಡ ಪ್ರಕ್ರಿಯಾ ಸಂಹಿತೆ, 1973 ರ (ಇನ್ನು ಮುಂದೆ ಸಂಕ್ಷಿಪ್ತವಾಗಿ ' ಸಿಆರ್‌ಪಿಸಿ ' ಎಂದು ಉಲ್ಲೇಖಿಸಲಾಗಿದೆ) 125 ನೇ ಪ್ರಕರಣದ ಮೇರೆಗೆ ಅರ್ಜಿ ಸಲ್ಲಿಸಿದ ದಿನಾಂಕದಂದು ಇದ್ದಂತೆ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದರೆಂಬ ಬಗ್ಗೆ ವಿವಾದವಿಲ್ಲ ೧ ಮತ್ತು ನಿಶಾನೆ-ಪಿ .74, ಆಕೆಯು ಮೆ ಗರುಡ ಆಟೋಕ್ರಾಫ್ಟ್ ಪ್ರೈವೇಟ್ ಲಿಮಿಟೆಡ್ ಇವರಲ್ಲಿ ಸೇಲ್ಸ್ ಕೋ ಆರ್ಡಿನೇಟರ್ ಆಗಿ ಕೆಲಸ ಮಾಡುತ್ತಿದ್ದರೆಂದು ತೋರಿಸುತ್ತದೆ.ವಾಸ್ತವಾಂಶವೇನೆಂದರೆ ಸದರಿ ಅರ್ಜಿಯು ಇತ್ಯರ್ಥಕ್ಕೆ ಬಾಕಿ ಇರುವಾಗ ನಿಶಾನೆ-ಪಿ .74 ರಲ್ಲಿ ಕಂಡು ಬರುವಂತೆದಿನಾಂಕ: 06/03/2010 ರಿಂದ ಪರಿಣಮಿಸುವಂತೆ ಆಕೆಯು ತನ್ನ ಉದ್ಯೋಗಕ್ಕೆ ರಾಜೀನಾಮೆ ನೀಡಿದ್ದಾರೆ.ನಿರ್ವಿವಾದಿತವಾಗಿ ಇದರಲ್ಲಿನ 1 ನೇ ಪ್ರತಿವಾದಿಯು (ಪತ್ನಿ) ಶೈಕ್ಷಣಿಕವಾಗಿ ಕಮರ್ಷಿಯಲ್ ಪ್ರಾಕ್ಟಿಸ್‌ನಲ್ಲಿ ಡಿಪ್ಲೊಮಾ ಹೊಂದಿದ್ದಾರೆ.ಸದರಿ ಪರಿಸ್ಥಿತಿಗಳಲ್ಲಿ ಉಂಟಾಗುವ ಅಂಶವೇನೆಂದರೆ, ಒಂದು ನಿರ್ದಿಷ್ಟ ವಿದ್ಯಾರ್ಹತೆ ಹೊಂದಿರುವ ಹಾಗೂ ಅವರಿಂದಾಗಿ ಉದ್ಯೋಗ ದೊರಕಿಸಿಕೊಳ್ಳಬಹುದಾದ ವ್ಯಕ್ತಿ (ಪತ್ನಿ) ಜೀವನಾಂಶಕ್ಕೆ ಅರ್ಹರೇ ಎಂಬುದಾಗಿರುತ್ತದೆ.ಈ ಸಂಬಂಧದಲ್ಲಿ ಸಿಆರ್‌ಪಿಸಿಯ 125 ನೇ ಪ್ರಕರಣವನ್ನು ನೋಡಬೇಕಾಗಿದೆ.ಸದರಿ ಪ್ರಕರಣವು ಈ ಕೆಳಗಿನಂತಿದೆ:

125. ಹೆಂಡತಿ, ಮಕ್ಕಳು ಮತ್ತು ತಂದೆತಾಯಿಗಳ ಜೀವನಾಂಶಕ್ಕಾಗಿ ಆದೇಶ.

( 1) ಸಾಕಷ್ಟು ಸಂಪಾದನೆಯಿರುವ ಯಾರೇ ವ್ಯಕ್ತಿಯು,

( ಎ) ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಅಸಮರ್ಥಳಾದ ತನ್ನ ಹೆಂಡತಿಯನ್ನು; ಅಥವಾ

(ಬಿ) ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಅಸಮರ್ಥವಾದ ತನ್ನ, ಕಾನೂನುಸಮ್ಮತ ಅಥವಾ ಕಾನೂನು ಸಮ್ಮತವಲ್ಲದ ವಿವಾಹಿತ ಅಥವಾ ಅವಿವಾಹಿತ, ಅಪ್ರಾಪ್ತ ವಯಸ್ಕ ಮಗುವನ್ನು; ಅಥವಾ

(ಸಿ) ತನ್ನ ಕಾನೂನುಸಮ್ಮತ ಅಥವಾ ಕಾನೂನುಸಮ್ಮತವಲ್ಲದ (ವಿವಾಹಿತ ಪುತ್ರಿಯನ್ನು ಹೊರತುಪಡಿಸಿ) ಪ್ರಾಪ್ತ ವಯಸ್ಕ ಮಗುವು ಯಾವುದೇ ದೈಹಿಕ ಅಥವಾ ಮಾನಸಿಕ ವಿಕಲತೆ ಅಥವಾ ಕೃತಿಯ ಕಾರಣದಿ ಂ ದಾಗಿ ತನ್ನನ್ನು ತಾನು ಸ ಂ ರಕ್ಷಿಸಿಕೊಳ್ಳಲು ಅಸಮರ್ಥವಾಗಿರುವಲ್ಲಿ, ಅಂತಹ ಮಗುವನ್ನು; ಅಥವಾ

(ಡಿ) ತನ್ನನ್ನು ತಾನು ಸಂರಕ್ಷಿಸಿಕೊಳ್ಳಲು ಅಸಮರ್ಥನಾದ ಅಥವಾ ಅಸಮರ್ಥಳಾದ ತನ್ನ ತಂದೆ ಅಥವಾ ತಾಯಿಯನ್ನು ನಿರ್ಲಕ್ಷ್ಯ ಎ ಮಾಡಿದರೆ ಅಥವಾ ಸಂರಕ್ಷಿಸಲು ತಿರಸ್ಕರಿಸಿದರೆ, ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರು ಅಂತಹ ನಿರ್ಲಕ್ಷ್ಯ ಎಶ ಅಥವಾ ತಿರಸ್ಕಾರವು ರುಜುವಾತಾದ ಮೇಲೆ, ಅಂತಹ ವ್ಯಕ್ತಿಗೆ ಆತನ ಹೆಂಡತಿ ಅಥವಾ ಅಂತಹ ಮಗು, ತಂದೆ ಅಥವಾ ತಾಯಿಯ ರಕ್ಷಣೆಗಾಗಿ, ಅಂತಹ ಮ್ಯಾಜಿಸ್ಟ್ರೇಟರು ಸೂಕ್ತವೆಂದು ಆಲೋಚಿಸುವಂತಹ, ತಿಂಗಳ ದರದಲ್ಲಿ ತಿಂಗಳ ಭತ್ಯೆಯನ್ನು ಕೊಡಬೇಕೆಂದು ಮತ್ತು ಮ್ಯಾಜಿಸ್ಟ್ರೇಟರು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂತಹ ವ್ಯಕ್ತಿಗೆ ಅದನ್ನು ಸಂದಾಯ ಮಾಡಬೇಕೆಂದು ಆದೇಶಿಸಬಹುದು:

ಪರಂತು, ಮ್ಯಾಜಿಸ್ಟ್ರೇಟರು (ಬಿ) ಖಂಡದಲ್ಲಿ ಉಲ್ಲೇಖಿಸಲಾದ ಅಪ್ರಾಪ್ತವಯಸ್ಕ ಹೆಣ್ಣು ಮಗುವಿನ ತಂದೆಗೆ, ಅವಳಿಗೆ ಮದುವೆಯಾಗಿದ್ದು ಅಂತಹ ಅಪ್ರಾಪ್ತ ವಯಸ್ಕ ಹೆಣ್ಣು ಮಗುವಿನ ಣ ಗಂಡನು ಸಾಕಷ್ಟು ಸಂಪಾದನೆಯನ್ನು ಹೊಂದಿಲ್ಲವೆಂದು ಅವರಿಗೆ ಮನದಟ್ಟಾದರೆ, ಅಂತಹ ಭತ್ಯೆಯನ್ನು ಅವಳು ಪ್ರಾಪ್ತವಯಸ್ಕ ಳಾಗುವವರೆಗೆ ಕೊಡಲು ಆದೇಶಿಸಬಹುದು.

ಮತ್ತೂ ಪರಂತು, ಮ್ಯಾಜಿಸ್ಟ್ರೇಟರು, ಈ ಉಪ ಪ್ರಕರಣದ ಮೇರೆಗೆ ಜೀವನಾಂಶಕ್ಕಾಗಿ ತಿಂಗಳ ಭತ್ಯೆಕ್ಕೆ ಸಂಬಂಧಿಸಿರುವ ವ್ಯವಹರಣೆಯು ಇತ್ಯರ್ಥದಲ್ಲಿರುವಾಗ ತನ್ನ ಹೆಂಡತಿ ಅಥವಾ ಅಂಥ ಮಗು, ತಂದೆ ಅಥವಾ ತಾಯಿಯ ಮಧ್ಯಂತರ ಜೀವನಾಂಶಕ್ಕಾಗಿ ಮತ್ತು ಅಂಥ ವ್ಯವಹರಣೆಯ ವೆಚ್ಚಕ್ಕಾಗಿ ಮ್ಯಾಜಿಸ್ಟ್ರೇಟರು ಸೂಕ್ತವೆಂದು ಪರಿಗಣಿಸುವಂಥ ತಿಂಗಳ ಭತ್ಯೆಯನ್ನು ಅಂಥ ವ್ಯಕ್ತಿಗೆ ನೀಡುವಂತೆ ಮತ್ತು ಮ್ಯಾಜಿಸ್ಟ್ರೇಟರು ಕಾಲಕಾಲಕ್ಕೆ ನಿರ್ದೇಶಿಸಬಹುದಾದಂತೆ ಅಂಥ ವ್ಯಕ್ತಿಗೆ ಅದನ್ನು ಸಂದಾಯ ಮಾಡುವಂತೆ ಆದೇಶಿಸಬಹುದು.

ಪರಂತು, ಎರಡನೇ ಪರಂತುಕದ ಮೇರೆಗೆ ಮಧ್ಯಂತರ ಜೀವನಾಂಶಕ್ಕಾಗಿ ಮತ್ತು ವ್ಯವಹರಣೆಯ ವೆಚ್ಚಕ್ಕಾಗಿ ತಿಂಗಳ ಭತ್ಯೆಯ ಮನವಿಯನ್ನು ಸಾಧ್ಯವಾದಷ್ಟು ಬೇಗನೆ, ಅಂಥ ವ್ಯಕ್ತಿಗೆ ಅರ್ಜಿಯ ನೋಟೀಸನ್ನು ಜಾರಿ ಮಾಡಿದ ದಿನಾಂಕದಿಂದ ಅರವತ್ತು ದಿವಸಗಳೊಳಗಾಗಿ ವಿಲೆ ಮಾಡತಕ್ಕದ್ದು.

ವಿವರಣೆ:- ಈ ಅಧ್ಯಾಯದ ಉದ್ದೇಶಗಳಿಗಾಗಿ,

(ಎ) " ಅಪ್ರಾಪ್ತ ವಯಸ್ಕ " ಎಂದರೆ, ಭಾರತ ಪ್ರಾಪ್ತವಯಸ್ಕತಾ ಅಧಿನಿಯಮ, 1875 (1875 ರ 9) ಉಪಬ ಂ ಧಗಳ ಮೇರೆಗೆ ಪ್ರಾಪ್ತವಯಸ್ಸನ್ನು ಪಡೆದಿಲ್ಲವೆಂದು ಭಾವಿಸಲಾಗಿರುವ ವ್ಯಕ್ತಿ;

(ಬಿ) " ಹೆಂಡತಿ " ಎಂಬ ಪದವು ಪತಿಯಿಂದ ವಿವಾಹ ವಿಚ್ಛೇದಿತಳಾಗಿರುವ ಅಥವಾ ವಿವಾಹ ವಿಚ್ಛೇದನ ಪಡೆದಿರುವ ಮತ್ತು ಪುನರ್ವಿವಾಹವಾಗದಿರುವ ಹೆಂಗಸನ್ನು ಒಳಗೊಳ್ಳುತ್ತದೆ;

(2) ಜೀವನಾಂಶಕ್ಕಾಗಿ ಅಥವಾ ಮಧ್ಯಂತರ ಜೀವನಾಂಶಕ್ಕಾಗಿ ಅಂತಹ ಯಾವುದೇ ಭತ್ಯೆಯನ್ನು ಮತ್ತು ವ್ಯವಹರಣೆಗಳ ವೆಚ್ಚಗಳನ್ನು ಆದೇಶದ ದಿನಾಂಕದಿಂದ ಅಥವಾ ಹಾಗೆ ಸಂದರ್ಭಾನುಸಾರ ಜೀವನಾಂಶದ ಭತ್ಯೆಯನ್ನು ಅಥವಾ ಮಧ್ಯಂತರ ಜೀವನಾಂಶ ಭತ್ಯೆಯನ್ನು ಮತ್ತು ವ್ಯವಹರಣೆಗಳ ವೆಚ್ಚಗಳನ್ನು ಕೇಳಿ

ಸಲ್ಲಿಸಿದ ಅರ್ಜಿಯ ದಿನಾಂಕದಿಂದ ಸಂದಾಯ ಮಾಡತಕ್ಕದ್ದೆಂದು ಆದೇಶ ಮಾಡಿದರೆ ಸಂದಾಯ ಮಾಡತಕ್ಕದ್ದು.

( 3) ಹಾಗೆ ಆದೇಶಿತನಾದ ಯಾರೇ ವ್ಯಕ್ತಿಯು ಸಾಕಷ್ಟು ಕಾರಣವಿಲ್ಲದೆ ಆದೇಶವನ್ನು ಪಾಲಿಸಲು ತಪ್ಪಿದರೆ, ಆ ಆದೇಶದ ಪ್ರತಿಯೊಂದು ಉಲ್ಲಂಘನೆಗಾಗಿ ಸಂದಾಯವಾಗಬೇಕಾದ ಮೊಬಲಗನ್ನು ವಸೂಲು ಮಾಡುವುದಕ್ಕಾಗಿ ಜುಲ್ಮಾನೆಯನ್ನು ವಸೂಲು ಮಾಡಲು ಉಪಬಂಧಿಸಲಾದ ರೀತಿಯಲ್ಲಿ ಒಂದು ವಾರಂಟನ್ನು ಯಾರೇ ಅಂತಹ ಮ್ಯಾಜಿಸ್ಟ್ರೇಟರು ಹೊರಡಿಸಬಹುದು ಮತ್ತು ವಾರಂಟಿನ ಜಾರಿಯ ನಂತರ ಪ್ರತಿ ತಿಂಗಳೂ ಸಂದಾಯವಾಗದೆ ಉಳಿದಿರುವ ಜೀವನಾಂಶ ಅಥವಾ ಮಧ್ಯಂತರ ಜೀವನಾಂಶ ಮತ್ತು ಸಂದರ್ಭಾನುಸಾರ ವ್ಯವಹರಣೆಯ ವೆಚ್ಚದ ಪೂರ್ಣ ಭತ್ಯೆ ಅಥವಾ ಅದರ ಭಾಗಕ್ಕಾಗಿ ಒಂದು ತಿಂಗಳವರೆಗಿನ, ಅಥವಾ ಸಂದಾಯವನ್ನು ಬೇಗ ಮಾಡಿದರೆ, ಅಲ್ಲಿಯವರೆಗಿನ ಅವಧಿಗಾಗಿ ಅಂತಹ ವ್ಯಕ್ತಿಗೆ ಕಾರಾವಾಸದ ದಂಡನೆಯ ಆದೇಶವನ್ನು ಮಾಡಬಹುದು:

ಪರಂತು, ಈ ಪ್ರಕರಣದ ಮೇರೆಗೆ ಸಂದಾಯವಾಗಬೇಕಾದ ಯಾವುದೇ ಮೊಬಲಗಿನ ವಸೂಲಿಗಾಗಿ, ಅದು ಬಾಕಿಯಾದ ದಿನಾಂಕದಿಂದ ಒಂದು ವರ್ಷದ ಅವಧಿಯೊಳಗೆ ಅ ಂ ತಹ ಮೊಬಲಗನ್ನು ವಸೂಲು ಮಾಡಲು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಹೊರತು, ಯಾವ ವಾರಂಟನ್ನೂ ಹೊರಡಿಸತಕ್ಕದ್ದಲ್ಲ:

ಮತ್ತೂ ಪರ ಂ ತು, ಅಂತಹ ವ್ಯಕ್ತಿಯು ತನ್ನೊಡನೆ ಸಹವಾಸಿಸಬೇಕೆಂಬ ಷರತ್ತಿನ ಮೇಲೆ ಸಂರಕ್ಷಿಸುವೆನೆಂದು ಹೇಳಿದರೆ ಮತ್ತು ಅವಳು ಅವನೊಡನೆ ಸಹವಾಸಿಸಲು ತಿರಸ್ಕರಿಸಿದರೆ ಅಂತಹ ಮ್ಯಾಜಿಸ್ಟ್ರೇಟರು ಅವಳು ಮಾಡಿದ ತಿರಸ್ಕರಣದ ಯಾವುದೇ ಕಾರಣವನ್ನು ಪರ್ಯಾಲೋಚಿಸಬಹುದು ಮತ್ತು ಹಾಗೆ ವ್ಯಕ್ತಿಯು ಹೇಳಿದ್ದರೂ ಈ ಪ್ರಕರಣದ ಮೇರೆಗೆ ಮ್ಯಾಜಿಸ್ಟ್ರೇಟರು, ಹಾಗೆ ಮಾಡುವುದಕ್ಕೆ ನ್ಯಾಯೋಚಿತ ಕಾರಣವಿದೆಯೆಂದು ಮನದಟ್ಟಾದರೆ, ಒಂದು ಆದೇಶವನ್ನು ಮಾಡಬಹುದು.

ವಿವರಣೆ.-ಒಬ್ಬ ಪತಿಯು ಇನ್ನೊಬ್ಬ ಸ್ತ್ರೀಯ ಜೊತೆ ಮದುವೆಯಾಗಿದ್ದರೆ ಅಥವಾ ಒಬ್ಬಳನ್ನು ಇಟ್ಟುಕೊಂಡಿದ್ದರೆ, ಅದನ್ನು ಅವನ ಹೆಂಡತಿಯು ಅವನೊಡನೆ ಜೀವಿಸಲು ತಿರಸ್ಕರಿಸಿದುದರ ನ್ಯಾಯಬದ್ಧ ಕಾರಣವನ್ನಾಗಿ ಭಾವಿಸತಕ್ಕದ್ದು.

(4) ಪತ್ನಿಯು ವ್ಯಭಿಚಾರದಲ್ಲಿ ಜೀವಿಸುತ್ತಿದ್ದರೆ, ಅಥವಾ ಯಾವುದೇ ಸಾಕಷ್ಟು ಕಾರಣವಿಲ್ಲದೆ ಅವಳು ತನ್ನ ಪತಿಯೊಡನೆ ಜೀವಿಸಲು ತಿರಸ್ಕರಿಸಿದರೆ, ಅಥವಾ ಅವರು ಪರಸ್ಪರ ಒಪ್ಪಿಗೆ ಮೂಲಕ ಬೇರೆ ಬೇರೆಯಾಗಿ ಜೀವಿಸುತ್ತಿದ್ದರೆ ತನ್ನ ಪತಿಯಿಂದ ಜೀವನಾಂಶ ಅಥವಾ ಮಧ್ಯಂತರ ಜೀವನಾಂಶ ಮತ್ತು ಸಂದರ್ಭಾನುಸಾರ ವ್ಯವಹರಣೆಯ ವೆಚ್ಚಕ್ಕಾಗಿ ಭತ್ಯೆಯನ್ನು ಸ್ವೀಕರಿಸಲು ಹಕ್ಕು ಹೊಂದತಕ್ಕದ್ದಲ್ಲ.

(5) ಯಾರ ಪರವಾಗಿ ಈ ಪ್ರಕರಣದ ಮೇರೆಗೆ ಒಂದು ಆದೇಶವನ್ನು ಮಾಡಲಾಯಿತೋ, ಆ ಯಾವುದೇ ಪತ್ನಿಯು ವ್ಯಭಿಚಾರದಲ್ಲಿ ಜೀವಿಸುತ್ತಿರುವಳೆಂಬ ಅಥವಾ ಸಾಕಷ್ಟು ಕಾರಣವಿಲ್ಲದೆ ಅವಳು ತನ್ನ ಪತಿಯೊಡನೆ ಜೀವಿಸಲು ತಿರಸ್ಕರಿಸುತ್ತಿರುವಳೆಂಬ ಅಥವಾ ಅವರು ಪರಸ್ಪರ ಒಪ್ಪಿಗೆಯ ಮೂಲಕ ಬೇರೆ ಬೇರೆಯಾಗಿ ಜೀವಿಸುತ್ತಿರುವರೆಂಬ ರುಜುವಾತಿನ ಮೇಲೆ ಮ್ಯಾಜಿಸ್ಟ್ರೇಟರು ಆದೇಶವನ್ನು ರದ್ದು ಮಾಡತಕ್ಕದ್ದು.

14. ಮೇಲಿನ ಪ್ರಕರಣವನ್ನು ಅದರಲ್ಲಿಯೂ ನಿರ್ದಿಷ್ಟವಾಗಿ ಸದರಿ ಪ್ರಕರಣದ ( 1) (   ಎ) ಮತ್ತು 1 (ಬಿ) ಯನ್ನು ಉಪ-ಪ್ರಕರಣವನ್ನು ಓದಲಾಗಿ, ಸದರಿ ಪ್ರಕರಣವು, ಕಾನೂನಿನ ಅಗತ್ಯತೆಯು ಪತ್ನಿ ಮತ್ತು ಮಗಳು ತಮಗೆ ತಾವೇ ಪೋಷಿಸಿಕೊಳ್ಳಲು ಇರುವ ಅಸಾಮರ್ಥ್ಯತೆಯನ್ನು ಒಬ್ಬ ವ್ಯಕ್ತಿಯು ತನ್ನನ್ನು ತಾನು ಪೋಷಿಸಿಕೊಳ್ಳಲು ಸಾಧ್ಯವಿಲ್ಲದಿರುವುದನ್ನು ಆಕೆಯು ಜೀವನೋಪಾಯ ಕಂಡುಕೊಳ್ಳಲು ಅವಳಿಗಿರುವ ಸಾಮರ್ಥ್ಯದೊಂದಿಗೆ ಸಮೀಕರಿಸಬಾರದು.ಒಬ್ಬ ವ್ಯಕ್ತಿಯು ಖಾಸಗಿಯಲ್ಲಿ ಅಥವಾ ಇತರ ಯಾವುದೇ ರೀತಿಯ ಸಂಸ್ಥೆಗಳಲ್ಲಿ ಯಾವುದೇ ಉದ್ಯೋಗಕ್ಕೆ ಶೈಕ್ಷಣಿಕವಾಗಿ ಹೆಚ್ಚು ಅರ್ಹರಾಗಿರಬಹುದು ಅಥವಾ ನಿರ್ದಿಷ್ಟ ಉದ್ಯೋಗವನ್ನು ನಿರ್ವಹಿಸಲು ಚ ಅರ್ಹರಾಗಿರಬಹುದು ಅಥವಾ ಯಾವುದೇ ಹುದ್ದೆ ಅಥವಾ ಉದ್ಯೋಗಕ್ಕೆ ಅರ್ಜಿ ಸಲ್ಲಿಸಲು ಸಾಮರ್ಥ್ಯ ಹೊಂದಿರಬಹುದು.ಆದರೂ ಸಹ ಆಕೆಯು ತನ್ನನ್ನು ತಾನು ಪೊಷಿಸಿಕೊಳ್ಳಲು ಅಸಾಧ್ಯವಾಗಬಹುದು.ಒಂದು ನಿರ್ದಿಷ್ಟ ವಿದ್ಯಾರ್ಹತೆ ಹೊಂದಿರುವುದರಿಂದಲೇ ಒಬ್ಬ ಮಹಿಳೆಯು ತನ್ನನ್ನು ತಾನು ಪೋಷಿಸಿಕೊಳ್ಳಬಲ್ಲಳು ಎಂಬುದಾಗಿ ಪರಿಗಣಿಸಲಾಗುವುದಿಲ್ಲ.ಪ್ರಕರಣದ ಪರಿಸ್ಥಿತಿಗಳಲ್ಲಿ ವ್ಯಕ್ತಿಯ ಶೈಕ್ಷಣಿಕ ವಿದ್ಯಾರ್ಹತೆಯು ಆತನ ಸಹಾಯಕ್ಕೆ ಬರಬಹುದು ಅಥವಾ ಉದ್ಯೋಗ ಅರ್ಜಿ ಸಲ್ಲಿಸುವಲ್ಲಿ ಅಥವಾ ಜೀವನೋಪಾಯ ಕಂಡುಕೊಳ್ಳಲು ಪ್ರಯತ್ನಿಸುವಲ್ಲಿ ಅಥವಾ ಯಾವುದಾದರೂ ವೃತ್ತಿಯಲ್ಲಿ ತೊಡಗಿಕೊಳ್ಳಲು ರಕ್ಷಣೆಗೆ ಬರಬಹುದು.ಅಂತಹ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿರುವುದರಿಂದಲೇ ಅಂತಹ ವಿದ್ಯಾರ್ಹತೆ ಹೊಂದಿರುವವರು ಅದರಲ್ಲಿಯೂ ನಿರ್ದಿಷ್ಟವಾಗಿ ಪತ್ನಿಯು ದಂಡ ಪ್ರಕ್ರಿಯಾ ಸಂಹಿತೆಯ 125 ನೇ ಪ್ರಕರಣದ ಅಡಿಯಲ್ಲಿ ತನ್ನನ್ನು ತಾನು ಪೋಷಿಸಿಕೊಳ್ಳಲು ಸಾಮರ್ಥ್ಯ ಹೊಂದಿದ್ದಾರೆಂಬ ನಿರ್ಣಯಕ್ಕೆ ಬರಲಾಗುವುದಿಲ್ಲ.ಒಂದು ನಿರ್ದಿಷ್ಟ ಸಮಯದಲ್ಲಿ ಆಕೆಯು ಕೆಲಸ ಮಾಡುತ್ತಿದ್ದ ಉದ್ಯೋಗಕ್ಕೆ ರಾಜೀನಾಮೆ ನೀಡಿ ಆಕೆಯನ್ನು ಆಕೆಯ ಪತಿ ಪೋಷಿಸಬೇಕೆಂದು ನಿರೀಕ್ಷಿಸುವುದಕ್ಕೆ ಮಹಿಳೆಗೆ ಹಲವಾರು ಕಾರಣಗಳಿರಬಹುದು.ಉದ್ಯೋಗಕ್ಕೆ ರಾಜೀನಾಮೆ ನೀಡುವಂತಹ ಅಥವಾ ವೃತ್ತಿಯನ್ನು ಬಿಡುವಂತಹ ಕೃತ್ಯವು, ಆ ಪರಿಸ್ಥಿತಿಗಳು ಬಹುಶಃ ಬೇರೆ ರೀತಿಯ ತೀರ್ಪಿಗೆ ಅವಕಾಶ ಮಾಡಿಕೊಡಬಹುದು.ಆಕೆಯ ಪತಿಯು ಆಕೆಯ ಜೀವನಾಂಶ ನೀಡಲು ಒತ್ತಾಯಿಸುವ ಉದ್ದೇಶದಿಂದ ಮಾತ್ರ ಎಂಬುದನ್ನು ಒಂದೇ ರೀತಿಯ ಸಾಕ್ಷ್ಯದ ಮೂಲಕ ದಾಖಲೆಗೆ ತರದ ಹೊರತು ಪತ್ನಿಯು ಯಾವುದೇ ಒಂದು ಶೈಕ್ಷಣಿಕ ವಿದ್ಯಾರ್ಹತೆ ಹೊಂದಿದ್ದು, ಅದು ಆಕೆಗೆ ಒಂದು ಕೆಲಸ ಅಥವಾ ಉದ್ಯೋಗ ದೊರಕಿಸಿಕೊಳ್ಳಬಹುದಾಂತಹ ಪ್ರಕರಣದಲ್ಲಿ ಆಕೆಗೆ ಜೀವನಾಂಶವನ್ನು ನಿರಾಕರಿಸುವಂತಿಲ್ಲ.

15. ಈ ಪ್ರಕರಣದಲ್ಲಿ, ಅರ್ಜಿದಾರರು (ಪತ್ನಿ) ಸೇಲ್ಸ್ ಕೋ-ಆರ್ಡಿನೇಟರ್ ಆಗಿ ಒಂದು ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು ಹಾಗೂ ಪ್ರಾ.ಸಾ .74 ರಿಂದ ಕಂಡುಬರುವಂತೆದಿನಾಂಕ: 06/03/2010 ರಿಂದ ಪರಿಣಮಿಸುವಂತೆ ತಮ್ಮ ಉದ್ಯೋಗಕ್ಕೆ ರಾಜೀನಾಮೆ ನೀಡಿರುವುದು ಕಂಡು ಬರುತ್ತದೆ.ಪ್ರತಿವಾದಿಸಂಖ್ಯೆ: 1 (ಪತ್ನಿ) ವಕೀಲರ ಪ್ರಕಾರ, ಆಕೆಯ ಮಗಳು ದೃಷ್ಟಿ (ಕಣ್ಣು) ದೋಷದಿಂದ ಬಳಲುತ್ತಿದ್ದುದರಿಂದ, ಆಕೆಯು ತನ್ನ ಉದ್ಯೋಗಕ್ಕೆ ರಾಜೀನಾಮೆ ನೀಡಬೇಕಾಯಿತೆಂದೂ ಅದಕ್ಕೆ 1 ನೇ ಪ್ರತಿವಾದಿಯು ವೈದ್ಯರೊಂದಿಗೆ ಸಮಾಲೋಚಿಸಿದ್ದು, ಅದು ನಿಶಾನೆ ಪಿ -45 ರ ವೈದ್ಯಕೀಯ ದಸ್ತಾವೇಜಿನಿಂದ ಕಾಣಬಹುದಾಗಿದೆಯೆಂದು ಹೇಳಿದ್ದಾರೆ.ಅರ್ಜಿದಾರರ (ಪತಿ) ವಕೀಲರ ಪ್ರಕಾರ, ನಿಶಾನೆ.ಪಿ -45 ಅವರ ದಿನಾಂಕದ ನಂತರದ್ದು, ಅಂದರೆ ಆಕೆಯ ರಾಜೀನಾಮೆಯ ನಂತರದ್ದು ಆಗಿದೆ. ಆಕೆಯ ರಾಜೀನಾಮೆ ಪತ್ರದದಿನಾಂಕ: 22/02/2010 ಹಾಗೂ ರಾಜೀನಾಮೆ ಅಂಗೀಕರಿಸಿದದಿನಾಂಕ: 06/03/2010 ಆಗಿದ್ದು, ನಿಶಾನೆ.ಪಿ -45 ಸದರಿ ವೈದ್ಯಕೀಯ ದಸ್ತಾವೇಜುದಿನಾಂಕ: 09/03/2010 ರಂದು ಆಗಿರುತ್ತದೆ.ಪ್ರತಿವಾದಿಯ (ಪತಿ) ವಕೀಲರು ನಿಶಾನೆ.ಪಿ .45 ರ

ಪ್ರಕಾರದಿನಾಂಕ: 09/03/2010 ರಂದು ನೇತ್ರ ತಜ್ಞರಿಗೆ ಹಣ ಸಂದಾಯ ಮಾಡಿದ ಕಾರಣದಿಂದಲೇ, 2 ನೇ ಪ್ರತಿವಾದಿ (ಮಗಳು) ಸದರಿ ದಿನಾಂಕಕ್ಕೆ ಮೊದಲು ಕಣ್ಣಿನ ಸಮಸ್ಯೆ ಹೊಂದಿರಲಿಲ್ಲ ಎಂದು ಅರ್ಥವಲ್ಲ ಎಂದು ಹೇಳಿದ್ದಾರೆ.ಅವರು ಮುಂದುವರೆದು ನಿವೇದಿಸುವುದೇನೆಂದರೆ 2 ನೇ ಪ್ರತಿವಾದಿ ಸದರಿ ದಿನಾಂಕಕ್ಕಿಂತಲೂ ಮೊದಲೇ ಕಣ್ಣಿನ ಸಮಸ್ಯೆ ಹೊಂದಿದ್ದರಿಂದ, ಆಕೆಯುದಿನಾಂಕ: 09/03/2020 ವೈದ್ಯರೊಂದಿಗೆ ಸಮಾಲೋಚಿಸಿದ್ದಾರೆ.

ಆದಾಗ್ಯೂ, ನಿಶಾನೆ.ಪಿ -45 ರ ವೈದ್ಯಕೀಯ ದಸ್ತಾವೇಜನ್ನು ಯಾವಾಗ ನೀಡಲಾಯಿತು ಹಾಗೂ ಯಾವಾಗ ರಾಜೀನಾಮೆಯನ್ನು ಅಂಗೀಕರಿಸಲಾಯಿತು ಎಂಬ ಸದರಿ ಚರ್ಚೆಗೆ ಹೋಗದೆ, ಕುಟುಂಬ ನ್ಯಾಯಾಲಯದ ಅರ್ಜಿದಾರರು ಅದರಲ್ಲಿ ಅರ್ಜಿದಾರಸಂಖ್ಯೆ: 2 (ಮಗಳು) ಕಣ್ಣಿನ ಸಮಸ್ಯೆಯಿಂದ ಬಳಲುತ್ತಿದ್ದರು ಎಂಬುದನ್ನು ತೋರಿಸಲು ಸಮರ್ಥರಾಗಿದ್ದಾರೆ ಎಂದು ಅಭಿಪ್ರಾಯ ಪಡಬಹುದಾಗಿದೆ. ಆಕೆಯ ಮಗಳ ಸದರಿ ಸಮಸ್ಯೆ ಮತ್ತು ಆಕೆಯ ಉದ್ಯೋಗದಿಂದ ಪತ್ನಿಯು ನೀಡಿದ್ದ ಆಪಾದಿತ ರಾಜೀನಾಮೆ ನಡುವೆ ಪರಸ್ಪರ ಸಂಬಂಧ ಕಲ್ಪಿಸಲು ಯಾವುದೇ ನೇರ ಸಾಕ್ಷ್ಯ ಎ ಇಲ್ಲ. ಆದಾಗ್ಯೂ, ಪತ್ನಿಯು ತನ್ನ ಪತಿಗೆ ಹಿಂಸೆ ಕೊಡಲು ಹಾಗೂ ಆಕೆಗೆ ಜೀವನಾಂಶ ನೀಡಲು ಒತ್ತಾಯಿಸುವುದಕ್ಕೆ ತನ್ನ ಉದ್ಯೋಗಕ್ಕೆ ರಾಜೀನಾಮೆ ನೀಡಿದರೆಂದು ಊಹಿಸಲು ಸಾಧ್ಯವಿಲ್ಲ.ಆ ಆ ಸಂಬಂಧವಾಗಿ ದಾಖಲೆಯಲ್ಲಿ ಸ್ವಲ್ಪಮಟ್ಟಿನ ಸಾಕ್ಷ್ಯವಾದರೂ ಇರಬೇಕು.ಪತ್ನಿಗೆ ಜೀವನಾಂಶ ನೀಡಲು ಆಕೆಯ ಪತಿಯನ್ನು ಒತ್ತಾಯಿಸುವ ಉದ್ದೇಶದಿಂದಲೇ ಪತ್ನಿ (ಕುಟುಂಬ ನ್ಯಾಯಾಲಯದಲ್ಲಿ ಅರ್ಜಿದಾರರು ಸಂ .1) ತನ್ನ ಉದ್ಯೋಗಕ್ಕೆ ರಾಜೀನಾಮೆ ನೀಡಿರುವರೆಂದು ಊಹಿಸಲು ಸಾಧ್ಯವಾಗುವಂತೆ ಮೌಖಿಕವಾಗಿಯಾಗಲಿ ಅಥವಾ ದಸ್ತಾವೇಜಿನಿಂದಾಗಲೀ ಯಾವುದೇ ಅಂಶ ನನಗೆ ಕಂಡು ಬರುತ್ತಿಲ್ಲ.ಮಮ್ತಾ ಜೈಸ್ವಾಲ್ (ಮೇಲಿನ) ಮೊಕದ್ದಮೆಯಲ್ಲಿ ಮಧ್ಯಪ್ರದೇಶ ಉಚ್ಚ ನ್ಯಾಯಾಲಯವು, ವಿಚ್ಛೇದನಕ್ಕಾಗಿ ವೈವಾಹಿಕ ಅರ್ಜಿ ನಡೆಸುತ್ತಿರುವ ಮಹಿಳೆಯು ಸೋಮಾರಿಯಾಗಿ ಕುಳಿತುಕೊಂಡು, ಅಂತಹ ವೈವಾಹಿಕ ಅರ್ಜಿಯ ಬಾಕಿಯ ಅವಧಿಯಲ್ಲಿ ಆತನಿಂದ ವ್ಯಾಜ್ಯಕಾಲೀಕ ಜೀವನಾಂಶವನ್ನು ತಗಾದೆ ಮಾಡಲು ಪತಿಯ ಮೇಲೆ ತನ್ನ ಹೊಣೆಯನ್ನು ಹೊರಿಸುವುದನ್ನು ಅನುಮತಿಸಲಾಗುವುದಿಲ್ಲವೆಂದು ನಿರ್ಣಯಿಸಲಾಗಿದ್ದರೂ ಸಹ, ಮಮ್ತಾ ಜೈಸ್ವಾಲ್ ಮೊಕದ್ದಮೆಯಲ್ಲಿ ಮಹಿಳೆಯು ಅತ್ಯುತ್ತಮ ವಿದ್ಯಾರ್ಹತೆ ಹೊಂದಿದ್ದ ಮಹಿಳೆಯಾಗಿದ್ದು, ಎಂ.ಎಸ್ಸಿ., ಎಂ.ಸಿ. ಎಂ.ಎಡ್ ನಂತಹ ಉತ್ತಮ ವಿದ್ಯಾರ್ಹತೆ ಹೊಂದಿದ್ದು, 1994 ರ ವರೆಗೂ ಗುಲಾಬ್ನಬಿ ಅಜಾದ್ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿದ್ದರು.ಹಾಗೆಯೇ ದಮನ್ ಪ್ರೀತ್ ಮೊಕದ್ದಮೆಯಲ್ಲಿ (ಮೇಲಿನ) ಸಹ ಪತ್ನಿಯು ಉತ್ತಮ ಶಿಕ್ಷಣ ಹೊಂದಿದ್ದು ಮಾತ್ರವಲ್ಲದೆ ತಿಂಗಳಿಗೆ ರೂ .50,000/ವೇತನ ಪಡೆಯುತ್ತಿದ್ದು, ತಾನಾಗಿಯೇ ಕೆಲಸ ಮಾಡದಿರಲು ನಿರ್ಧರಿಸಿದ್ದಾರೆ.ಸದರಿ ಪ್ರಕರಣಗಳಲ್ಲಿ, ಒಳ್ಳೆಯ ಉದ್ಯೋಗ ಇದ್ದರೂ ಎರಡು ಪ್ರಕರಣಗಳಲ್ಲಿನ ಪತ್ನಿಯರು ತಮ್ಮ ತಮ್ಮ ಪತಿಗಳಿಗೆ ಹಿಂಸೆ ಕೊಡಲು ಹಾಗೂ ಜೀವನಾಂಶ ನೀಡುವಂತೆ ಒತ್ತಾಯಿಸಲು ರಾಜೀನಾಮೆ ನೀಡಿದರು ಎಂಬ ನಿರ್ಣಯಕ್ಕೆ ಬರಲು ನ್ಯಾಯಾಲಯಗಳಿಗೆ ಅಂಶಗಳು ಇದ್ದುದರಿಂದ ಮಧ್ಯಪ್ರದೇಶ ಉಚ್ಚ ನ್ಯಾಯಾಲಯ ಹಾಗೂ ದೆಹಲಿ ಉಚ್ಚ ನ್ಯಾಯಾಲಯ, ಪತ್ನಿಯರು ಜೀವನಾಂಶಕ್ಕೆ ಹಕ್ಕುಳ್ಳವರಾಗಿಲ್ಲವೆಂಬ ನಿರ್ಣಯಕ್ಕೆ ಬಂದವು.ಈಗ ಇತ್ಯರ್ಥಪಡಿಸಬೇಕಾಗಿರುವ ಪ್ರಕರಣದ ವಾಸ್ತವಾಂಶಗಳು ಹಾಗೂ ಆ ಎರಡೂ ಪ್ರಕರಣಗಳಿಗಿಂತ ತೀರಾ ವಿಭಿನ್ನವಾಗಿರುವುದರಿಂದ ಹಾಗೂ ಪ್ರಸ್ತುತ ಪ್ರಕರಣದಲ್ಲಿ ಪತ್ನಿಯು ಡಿಪ್ಲೊಮೊ ಇನ್-ಕಮರ್ಷಿಯಲ್ ಪ್ರಾಕ್ಟೀಸ್ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿರುವುದರಿಂದ ಮತ್ತು ಆಕೆ ಅವಲಂಬಿತ ಮಗಳನ್ನು ಹೊಂದಿರುವುದರಿಂದ, ಆಕೆಯು ನಿಶಾನೆ ಪಿ -45 ರ ಪ್ರಕಾರ ಕಣ್ಣಿನ ಸಮಸ್ಯೆಯಿಂದ ಬಳಲುತ್ತಿರುವುದಾಗಿ

ಹೇಳಿರುವ ಕಾರಣಗಳ ವಾಸ್ತವಾಂಶಗಳಿಂದ ಹಾಗೂ ಅದಕ್ಕಿಂತಲೂ ಮುಖ್ಯವಾಗಿ ಮೇಲೆ ಹೇಳಲಾಗಿರುವಂತೆ ಯಾವುದೋ ಒಂದು ಶೈಕ್ಷಣಿಕ ವಿದ್ಯಾರ್ಹತೆ ಹೊಂದಿರುವುದರಿಂದಲೇ, ತಮ್ಮನ್ನು ತಾವು ಪೋಷಿಸಿಕೊಳ್ಳುವ ಸಾಮರ್ಥ್ಯವಿದೆಯೆಂದು ಯಾವಾಗಲೂ ಪರಿಭಾವಿಸಬಾರದು.ಇವರ ಪತ್ನಿಯ (ಪ್ರತಿವಾದಿ ಸಂಖ್ಯೆ .1) ರಾಜೀನಾಮೆಯು, ಆಕೆಯು ತನ್ನ ಪತಿಯಿಂದ (ಇದರಲ್ಲಿನ ಅರ್ಜಿದಾರ) ಜೀವನಾಂಶ ಕ್ಲೇಮು ಮಾಡುವ ಹಕ್ಕಿನಿಂದ ಅನರ್ಹಗೊಳಿಸುವಂತಿಲ್ಲವೆಂದು ನಾನು ಅಭಿಪ್ರಾಯಪಡುತ್ತೇನೆ.

16. ಇಂತಹುದೇ ಪರಿಸ್ಥಿತಿಗಳಲ್ಲಿ ರಮೇಶ್ ಮೊಕದ್ದಮೆಯಲ್ಲಿ (ಮೇಲಿನ) ಈ ನ್ಯಾಯಾಲಯದ ಸಮನ್ವಯ ಪೀಠವು ಶ್ರೀಮತಿ ತೇಜಸ್ವಿನಿ –ವಿರುದ್ಧ-ಅರವಿಂದ ತೇಜಸ್ ಚಂದ್ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಮತ್ತೊಂದು ಸಮನ್ವಯ ಪೀಠದ ಮತ್ತೊಂದು ತೀರ್ಪನ್ನು ಉಲ್ಲೇಖಿಸಿ, ಅರ್ಜಿಯ ಹಣೆಯ ಬರಹವು ' ತಾನಾಗಿಯೇ ಪೋಷಿಸಿಕೊಳ್ಳಲು ಅಸಮರ್ಥರಾದ ' ಎಂಬ ಪದಾವಳಿಯ ಅರ್ಥೈಸುವಿಕೆಯ ಮೇಲೆ ಪ್ರಮುಖವಾಗಿ ಅವಲಂಬಿತವಾಗಿರುತ್ತದೆಯೇ ವಿನಾ ' ಗಳಿಸುವ ಸಾಮರ್ಥ್ಯ ಇದೆ ' ಎಂಬ ಅರ್ಥ ಬರುತ್ತದೆಂದು ಅರ್ಥ ಮಾಡಿಕೊಳ್ಳಲಾಗದು ಎಂದು ನಿರ್ಣಯಿಸಿದೆ.

ಹೀಗಾಗಿ, ಇದರಲ್ಲಿನ ಪ್ರತಿವಾದಿ ಸಂ .1 (ಪತ್ನಿ) ತಾನಾಗಿಯೇ ಪೋಷಿಸಿಕೊಳ್ಳಲು ಅಸಮರ್ಥವಾಗಿರುವುದಾಗಿ ತೋರಿಸಿರುವುದರಿಂದ ಆಕೆಯು ಡಿಪ್ಲೋಮಾ ಇನ್ ಕಮರ್ಷಿಯಲ್ ಪ್ರಾಕ್ಟಿಸ್ ಶೈಕ್ಷಣಿಕ ವಿದ್ಯಾರ್ಹತೆ ಹೊಂದಿರುವುದು ಹಾಗೂ ತದನಂತರ ತನ್ನ ಉದ್ಯೋಗಕ್ಕೆ ರಾಜೀನಾಮೆ ನೀಡಿರುವ ಕೃತ್ಯವು, ಆಕೆಯು ತನ್ನ ಪತಿಯಿಂದ ಜೀವನಾಂಶ ಕ್ಲೇಮು ಮಾಡಲು ಆಕೆಯನ್ನು ತಪ್ಪಿಸುವುದಿಲ್ಲ.ಹಾಗಾಗಿ, ಈ ಅಂಶದ ಬಗ್ಗೆ ಅರ್ಜಿದಾರರ ವಕೀಲರ ವಾದವನ್ನು ಒಪ್ಪಲಾಗುವುದಿಲ್ಲ.

ಮುಂದುವರೆದು, ಅರ್ಜಿದಾರರ ವಕೀಲರು ವಾದಿಸುವುದೇನೆಂದರೆ, ಅರ್ಜಿದಾರರು ವಕೀಲ ವೃತ್ತಿ ನಡೆಸುತ್ತಿದ್ದಾರೆ ಹಾಗೂ ಅವರು ಯಾವುದೇ ಸಂಸ್ಥೆಯಲ್ಲಿ ಕೆಲಸ ಮಾಡಿ ಸಂಬಳ ಪಡೆಯುತ್ತಿಲ್ಲ ಅಥವಾ ತನ್ನದೇ ವ್ಯಾಪಾರ ಸಂಸ್ಥೆ ನಡೆಸುತ್ತಿಲ್ಲ.ಹಾಗಾಗಿ ಅವರು ತನ್ನ ಮಗಳನ್ನು ಪೋಷಿಸಲು ಒಪ್ಪಿಕೊಂಡಿದ್ದರೂ, ಪತ್ನಿಗೆ ಜೀವನಾಂಶ ಕೊಡಲು ಸಾಧ್ಯವಿಲ್ಲ ಎಂಬುದಾಗಿದೆ.

17. ಪ್ರಾ.ಸಾ .1 ಆಗಿ ಪಾಟೀ ಸವಾಲಿನ ದಿನಾಂಕದಂದು ಇದ್ದಂತೆ ಪ್ರಸ್ತುತ ಅರ್ಜಿದಾರರು ಮೆ || ಭಂಡಾರಿ ಇನ್ಫ್ರಾ ಪ್ರಾಜೆಕ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಎಂಬ ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು ತಿಂಗಳಿಗೆ 28,000/ರೂಪಾಯಿಗಳ ಸಂಬಳ ಪಡೆಯುತ್ತಿದ್ದರು.ಈ ಬಗ್ಗೆ ಅವರೇ ತಮ್ಮ ಪಾಟೀ ಸವಾಲಿನಲ್ಲಿ ಹೇಳಿದ್ದು, ಈ ಕಾರಣಕ್ಕಾಗಿ ಅರ್ಜಿದಾರರ (ಪತಿಯು) ವಕೀಲರ ಸದರಿ ವಾದವನ್ನು ಒಪ್ಪಲಾಗುವುದಿಲ್ಲ.ರುಚಿಕ ಡೆವಲಪರ್ ಎಂಬ ಹೆಸರಿನಲ್ಲಿ ಕಂಪನಿಯನ್ನು ಸಹ ಅವರು ನಡೆಸುತ್ತಿದ್ದರೆಂಬುದನ್ನು ಅವರು ನಿರಾಕರಿಸಿದರೂ ಸಹ ಮೆ || ರುಚಿಕ ಡೆವಲಪರ್ ಪ್ರೈ.ಲಿಮಿಟೆಡ್ ಎಂಬ ಹೆಸರಿನಲ್ಲಿ 2005-06ನೇ ವರ್ಷದಲ್ಲಿ ಜಾಹೀರಾತು ನೀಡಿದ್ದನ್ನು ಹಾಗೂ ಆ ಬಗ್ಗೆ ನಿಶಾನೆ, ಪಿ -76 ರ ದಾಖಲೆಯು ನಿಜ ಎಂಬುದಾಗಿ ಅವರು ಒಪ್ಪಿಕೊಂಡಿದ್ದಾರೆ.ಸಾಕ್ಷಿದಾರರು ತನ್ನ ಸಂಸ್ಥೆಯನ್ನು ' ಪ್ರೈವೇಟ್ ಲಿಮಿಟೆಡ್ ಕಂಪನಿ ' ಎಂದು ತಪ್ಪಾಗಿ ತೋರಿಸಲಾಗಿದೆ ಎಂದು ವಾದಿಸಿದರು.ಆ ಬಗ್ಗೆ ಯಾವುದೇ ದಸ್ತಾವೇಜು ಅಥವಾ ಸಾಕ್ಷ್ಯ ಎಲಾ ಹಾಜರುಪಡಿಸಿಲ್ಲ.ಆದರೆ, ವಾಸ್ತವಾಂಶವೇನೆಂದರೆ, ಅವರು ' ರುಚಿಕ ಡೆವಲಪರ್ ' ಎಂಬ ಹೆಸರಿನಲ್ಲಿ ' ಪ್ರೈವೇಟ್ ಲಿಮಿಟೆಡ್ ಕಂಪನಿ ' ಎಂದು ತೋರಿಸಲಾದ ಸಂಸ್ಥೆಯನ್ನು ನಡೆಸುತ್ತಿದ್ದರೂ ' ರುಚಿಕ ' ಎಂಬ ಆ ಹೆಸರು, ಪ್ರಾಸಂಗಿಕವಾಗಿ ಆತನ ಮಗಳ ಹೆಸರಾಗಿದ್ದು, ಅವರು ಇದರಲ್ಲಿ ಪ್ರತಿವಾದಿಸಂಖ್ಯೆ: 2 ಆಗಿರುತ್ತಾರೆ.

ಇದರಲ್ಲಿನ ಪ್ರತಿವಾದಿಗಳು ಅಲ್ಲಗಳೆಯದಿರುವಂತೆ ಅರ್ಜಿದಾರರ (ಪತಿಯ) ವಕೀಲರ ನಿವೇದನೆಯನ್ನು ಪರಿಗಣನೆಗೆ ತೆಗೆದುಕೊಂಡ ನಂತರವೂ, ಅರ್ಜಿದಾರರು (ಪತಿ) ಈಗ ಪೂರ್ಣಕಾಲಿಕ ವಕೀಲರಾಗಿರುತ್ತಾರೆ.ಆದರೆ, ಅವರು ಮೆ || ಭಂಡಾರಿ ಇನ್ಫ್ರಾ ಪ್ರಾಜೆಕ್ಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನಲ್ಲಿ ಕೆಲಸ ಮಾಡುತ್ತಿದ್ದಾಗ ಅಥವಾ ಮೆ || ರುಚಿಕ ಡೆವಲಪರ್ ಎಂಬ ಹೆಸರಿನಲ್ಲಿ ಸಂಸ್ಥೆಯನ್ನು ನಡೆಸುತ್ತಿದ್ದಾಗ ಗಳಿಸುತ್ತಿದ್ದುದಕ್ಕಿಂತ ಆತನ ಆದಾಯ ಕಡಿಮೆ ಇದೆಯೆಂದು ಯಾವುದೇ ನಿರ್ಣಯಕ್ಕೆ ಅಥವಾ ಅಭಿಪ್ರಾಯಕ್ಕೆ ಬರಲು ದಾಖಲೆಯಲ್ಲಿ ಏನೂ ಇಲ್ಲ.

ಉದ್ಯೋಗದಿಂದ ಈ ಹಿಂದೆ ಆತನು ಪಡೆಯುತ್ತಿದ್ದುದಕ್ಕಿಂತ ಹೆಚ್ಚಿನ ಆದಾಯ ಪಡೆಯುವ ವಿಶ್ವಾಸವನ್ನು ಆತನು ಹೊಂದಿದ್ದಾಗ ಮಾತ್ರ ಒಬ್ಬ ಬ ಮನುಷ್ಯನು ತನ್ನ ಖಾಸಗಿ ಆದಾಯ/ಸಂಬಳದ ಉದ್ಯೋಗ ಬಿಟ್ಟು ಹೊಸ ವೃತ್ತಿಯಲ್ಲಿ ತೊಡಗುತ್ತಾನೆ.ಆದರೆ ಪ್ರಸ್ತುತದ ಅರ್ಜಿದಾರರು ಅದಕ್ಕೆ ಅಪವಾದ ಎಂದು ತೋರಿಸಲು ಯಾವುದೇ ವಿಷಯವನ್ನು ದಾಖಲಿಸಲಾಗಿಲ್ಲ.ಆದ್ದರಿಂದ, ಪ್ರಸ್ತುತದ ಅರ್ಜಿದಾರರು (ಪತಿ) ಪೂರ್ಣಕಾಲಿಕ ವಕೀಲನಾಗಿ ವೃತ್ತಿ ನಡೆಸುವ ಕಾರಣದಿಂದಲೇ, ಆತನು ಪ್ರಶ್ನಿತ ಪ್ರದೇಶದಲ್ಲಿ ಕುಟುಂಬ ನ್ಯಾಯಾಲಯದಿಂದ ಆದೇಶಿಸಲಾಗಿರುವ ಜೀವನಾಂಶವನ್ನು ತನ್ನ ಪತ್ನಿ ಮತ್ತು ಮಗಳಿಗೆ ಸಂದಾಯ ಮಾಡಲು ಆದಾಯದ ಮೂಲಗಳಿಲ್ಲ ಎಂಬುದಾಗಿ ಊಹಿಸಲು ಸಾಧ್ಯವಿಲ್ಲ.

18. ಕೊನೆಯದಾಗಿ, ಪತ್ನಿಯ ವರ್ತನೆಯು, ಆಕೆಯು ಯಾವುದೇ ಜೀವನಾಂಶವನ್ನು ಕ್ಲೇಮು ಮಾಡುವುದರಿಂದ ಆಕೆಗೆ ಹಕ್ಕಿಲ್ಲದಂತೆ ಮಾಡುತ್ತದೆಂದು ಅರ್ಜಿದಾರರ ವಕೀಲರು ವಾದಿಸಿದರು.ಈ ಸಂಬಂಧದಲ್ಲಿ ಪರಿಷ್ಕರಣಾ ಅರ್ಜಿಯ ವಿವರಣ ಪತ್ರದ ಕ ೦ ಡಿಕೆ 4 ರ ಕಡೆ ಈ ನ್ಯಾಯಾಲಯದ ಗಮನ ಸೆಳೆದು ನಿವೇದಿಸಿಕೊಂಡದ್ದೇನೆಂದರೆ, ಪತ್ನಿ ಅಥವಾ ಆಕೆಯ ಸೂಚನೆಯ ಮೇರೆಗೆ ಪ್ರಸ್ತುತ ಅರ್ಜಿದಾರರ (ಪತಿಯ) ವಿರುದ್ಧ ಮೂರು ಕ್ರಿಮಿನಲ್ ಕೇಸುಗಳನ್ನು ಸೇರಿದಂತೆ ನಾಲ್ಕು ಕೇಸುಗಳನ್ನು ಹಾಕಿದ್ದು, ಆಕೆಯು ತನ್ನ ಪತಿಯನ್ನು ಅನಾವಶ್ಯಕವಾಗಿ ವ್ಯಾಜ್ಯ ಮತ್ತು ತೊಂದರೆಯಲ್ಲಿ ಸಿಕ್ಕಿ ಹಾಕಿಸುವುದರಲ್ಲಿಯೇ ಆಸಕ್ತಿ ಹೊಂದಿದ್ದಾರೆಂಬುದನ್ನು ತೋರಿಸುತ್ತದೆಂದು ಹೇಳಿದ್ದಾರೆ.

ಅರ್ಜಿಯ ವಿವರಣ ಪತ್ರದಲ್ಲಿ ಉಲ್ಲೇಖಿಸಿರುವ ನಾಲ್ಕು ಪ್ರಕರಣಗಳೆಂದರೆ,ಸಂಖ್ಯೆ: 22131/2006, ಸಿಸಿ.ಸಂಖ್ಯೆ:22705/2006, ಮೂಲ ದಾವೆ ಸಂ .7949/2009 ಹಾಗೂ ಕ್ರಿ.ಸಂ.ಸಂ .381/2007.ಅರ್ಜಿಯ ವಿವರಣ ಪತ್ರದಲ್ಲಿ ಪ್ರಸ್ತುತ ಅರ್ಜಿದಾರರಿಂದ ಹೇಳಲಾಗಿರುವಂತೆ ಹಾಗೂ ಉಭಯ ಪಕ್ಷಕಾರರ ವಕೀಲರುಗಳಿಂದ ನಿವೇದಿಸಲಾಗಿರುವಂತೆ ಆ ಪ್ರಕರಣಗಳಿಗೆ ಸಂಬಂಧಿಸಿದ ವಿವರಣೆಗಳೇನೆಂದರೆ, ಸಿಸಿಸಂ .22131/2006 ಇದರಲ್ಲಿ ಪ್ರಸ್ತುತ ಪ್ರತಿವಾದಿ ಸಂಖ್ಯೆ .1 (ಪತ್ನಿ) ಫಿರ್ಯಾದುದಾರರಾಗಿದ್ದಾರೆ.ಪ್ರಸ್ತುತದ ಅರ್ಜಿದಾರರು (ಪತಿ) ಭಾರತ ದಂಡ ಸಂಹಿತೆಯ 498- ಎ ಪ್ರಕರಣದ ಮೇರೆಗೆ ಹಾಗೂ ವರದಕ್ಷಿಣೆ ನಿಷೇಧ ಅಧಿನಿಯಮದ 4 ನೇ ಪ್ರಕರಣದ ಮೇರೆಗೆ ದಂಡಿಸಬಹುದಾದ ಆರೋಪಿತ ಅಪರಾಧಗಳಿಗಾಗಿ ನಿರ್ಣೀತ ಅಪರಾಧಿಯಾಗಿದ್ದರು ಹಾಗೂ ಕ್ರಿಮಿನಲ್ ಅಪೀಲು ಸಂಖ್ಯೆ.839/2011 ರಲ್ಲಿ ಅವರ ಅಪೀಲು ನ್ಯಾಯ ನಿರ್ಣಯಕ್ಕಾಗಿ ಬಾಕಿ ಇದೆಯೆಂದು ಹೇಳಲಾಗಿದ್ದು, ಅದರ ಅರ್ಥ ಮೊದಲನೆಯದಾಗಿ ಅಧಿವಿಚಾರಣಾ ನ್ಯಾಯಾಲಯವು ಪ್ರಸ್ತುತ ಅರ್ಜಿದಾರರನ್ನು ಆ ಆರೋಪಿತ ಅಪರಾಧಗಳ ತಪ್ಪಿತಸ್ಥರೆಂದು ನಿರ್ಣಯಿಸಿದೆ.ಹಾಗಾಗಿ, ಈ ಹಂತದಲ್ಲಿ, ಪತ್ನಿಯಿಂದ ಸಲ್ಲಿಸಲಾದ ಕ್ರಿಮಿನಲ್ ಕೇಸು ಕ್ಷುಲ್ಲಕವಾದುದು ಎಂದು ಹೇಳಲು ಬರುವುದಿಲ್ಲ.

ಹಾಗೆಯೇ, ಒಪ್ಪಿಕೊಂಡಿರುವಂತೆ ಸಿ.ಸಿ.ಸಂಖ್ಯೆ:22705/2006 ರಲ್ಲಿನ ಪ್ರಕರಣವು ಒಂದು ಖಾಸಗಿ ದೂರು ಆಗಿದ್ದು, ಇದನ್ನು ಶ್ರೀಮತಿ ಪಂಕಜ ತಮ್ಮಣ್ಣ ಎಂಬುವವರು ದಂಡ ಪ್ರಕ್ರಿಯ ಸಂಹಿತೆಯ 200 ನೇ ಪ್ರಕರಣದ ಮೇರೆಗೆ, ವರ್ಗಾವಣೀಯ ಲಿಖಿತಗಳ ಅಧಿನಿಯಮದ 138 ನೇ ಪ್ರಕರಣದ ಮೇರೆಗೆ ಶಿಕ್ಷಿಸಬಹುದಾದ ಅಪರಾಧಕ್ಕಾಗಿ ಪ್ರಸ್ತುತ ಅರ್ಜಿದಾರರ ವಿರುದ್ಧ ಹಾಕಲಾಗಿತ್ತು. ಒಪ್ಪಿಕೊಂಡಿರುವಂತೆ, ಸದರಿ ಪ್ರಕರಣದ ದೂರುದಾರರು ಪ್ರಸ್ತುತ ಪ್ರತಿವಾದಿಯಸಂಖ್ಯೆ: 1 (ಪತ್ನಿ) ಅಲ್ಲ. ಆದರೆ ದೂರುದಾರರು ಪ್ರಸ್ತುತ ಪ್ರತಿವಾದಿ ಸಂಖ್ಯೆ .1 ಇವರ ಸಹೋದರಿ ಎಂದು ಹೇಳಲಾಗಿದೆ.ಪ್ರಸ್ತುತ ಪ್ರತಿವಾದಿ ಸಂ .1 ರ ಸಹೋದರಿಯು, ಪ್ರಸ್ತುತ ಅರ್ಜಿದಾರರ ವಿರುದ್ಧ ಚೆಕ್ ನಿರಾಕರಣೆ ಕೇಸನ್ನು ಹಾಕಿದ್ದು, ಸದರಿ ಪ್ರಕರಣವನ್ನು ತಪ್ಪಾಗಿ ಅದರಲ್ಲಿಯೂ ಪ್ರತಿವಾದಿ ಸಂಖ್ಯೆ .1 ಇವರ ಚಿತಾವಣೆಯ ಮೇರೆಗೆ ಹಾಕಲಾಗಿದೆಯೆಂದು ಅನುರೂಪಿಸಲಾಗದು.

19. ವಕೀಲರುಗಳ ಪ್ರಕಾರ ಸದರಿ ಅಪರಾಧ ಮೊಕದ್ದಮೆಯಲ್ಲಿ ಸಹ ಪ್ರಸ್ತುತ ಅರ್ಜಿದಾರರನ್ನು (ಪತಿಯನ್ನು) ಅಧಿವಿಚಾರಣಾ ನ್ಯಾಯಾಲಯ ನಿರ್ಣೀತ ಅಪರಾಧಿಯನ್ನಾಗಿಸಿತ್ತು.ಆದರೆ ಅಪೀಲಿನಲ್ಲಿ ಸತ್ರ ನ್ಯಾಯಾಧೀಶರ ನ್ಯಾಯಾಲಯ ಖುಲಾಸೆ ಮಾಡಿತು.ಹಾಗಾಗಿ, ಸದರಿ ವ್ಯಾಜ್ಯವನ್ನು ಕ್ಷುಲ್ಲಕ ವ್ಯಾಜ್ಯ ಎಂದು ಪರಿಗಣಿಸಲಾಗದು ಹಾಗೂ ಪ್ರಸ್ತುತ ಪ್ರತಿವಾದಿಸಂಖ್ಯೆ: 1 ರವರಿಂದಾಗಿ ಹಾಕಲಾಯಿತು ಎಂದು ಪರಿಗಣಿಸಲಾಗದು.

ಒಪ್ಪಿಕೊಂಡಿರುವಂತೆ, ಮೂಲ ದಾವೆಸಂಖ್ಯೆ: 7949/2009 ನ್ನು ಅರ್ಜಿದಾರರಿಂದ ಹಾಗೂ ಆತನ ತಂದೆಯ ಆರೋಪಿತ ಪಿತ್ರಾರ್ಜಿತ ಸ್ವತ್ತುಗಳಲ್ಲಿ ಆಕೆಯ ಆರೋಪಿತ ಪಾಲನ್ನು ಕ್ಲೇಮು ಮಾಡಿ ತನ್ನ ಸ್ವಾಭಾವಿಕ ಪೋಷಕ ಅಂದರೆ ಪ್ರತಿವಾದಿಸಂಖ್ಯೆ: 1 ಇವರ ಮೂಲಕ ಪ್ರಸ್ತುತದ ಪ್ರತಿವಾದಿಸಂಖ್ಯೆ: 2 ಹಾಕಿರುವುದಾಗಿದೆ.ಸದರಿ ಮೂಲ ದಾವೆಯು ಅರ್ಹತೆಯ ಮೇಲೆ ಅಂತಿಮತೆ ತಲುಪುತ್ತಿರುವಾಗ, ಸದರಿ ದಾವೆಯನ್ನು ಇದರಲ್ಲಿನ ಪ್ರಸ್ತುತ ಪ್ರತಿವಾದಿಗಳಿಂದ ಹಾಕಲಾದ ಸುಳ್ಳು ಅಥವಾ ಕ್ಷುಲ್ಲಕ ವ್ಯಾಜ್ಯ ಎಂದು ಹೇಳಲಾಗುವುದಿಲ್ಲ.

ಕೊನೆಯದಾಗಿ, ಕ್ರಿಮಿನಲ್ ಸಂಕೀರ್ಣಸಂಖ್ಯೆ: 381/2007 ಪ್ರಸ್ತುತದ ವ್ಯಾಜ್ಯದಾಗಿದ್ದು, ಅದು ಸದರಿ ಕ್ರಿಮಿನಲ್ ಸಂಕೀರ್ಣಸಂಖ್ಯೆ: 2007 ರಿಂದ ಪ್ರಸ್ತುತದ ಪರಿಷ್ಕರಣಾ ಅರ್ಜಿಯು ಉಂಟಾಗಿದ್ದು, ಇದರಲ್ಲಿನ ಪ್ರತಿವಾದಿಗಳು, ದಂಡ ಪ್ರಕ್ರಿಯಾ ಸಂಹಿತೆಯ 125 ನೇ ಪ್ರಕರಣದ ಮೇರೆಗೆ ಸದರಿ ಅರ್ಜಿಯನ್ನು ಸಲ್ಲಿಸಿದ್ದಾರೆನ್ನುವ ಒಂದೇ ಕಾರಣದಿಂದ, ಅದನ್ನು ಅರ್ಜಿದಾರರಿಗೆ ಹಿಂಸೆ ಕೊಡಲು ಸಲ್ಲಿಸಲಾದ ಸುಳ್ಳು ಅರ್ಜಿಯೆಂದು ನಿರ್ಣಯಿಸಲಾಗದು.ಹಾಗಾಗಿ ಕುಟುಂಬ ನ್ಯಾಯಾಲಯದಲ್ಲಿ ಅರ್ಜಿದಾರರಾಗಿದ್ದ ಪ್ರಸ್ತುತ ಪ್ರತಿವಾದಿಗಳ ವರ್ತನೆಯು ತುಂಬಾ ಪ್ರಶ್ನಾರ್ಹವಾದುದು ಎಂಬ ಅರ್ಜಿದಾರರ ಪರ ವಕೀಲರ ವಾದವನ್ನು ಹಾಗೂ ಅರ್ಜಿದಾರರಿಗೆ ಹಿಂಸೆ ಕೊಡಲು ಪ್ರತಿವಾದಿಗಳು ಕ್ಷುಲ್ಲಕ ವ್ಯಾಜ್ಯ ಹೂಡಿದ್ದಾರೆಂಬ ವಾದವನ್ನು ಸಹ ಒಪ್ಪಲಾಗುವುದಿಲ್ಲ.

ಅರ್ಜಿದಾರರ ವಕೀಲರು ತಮ್ಮ ವಾದವನ್ನು ಮುಕ್ತಾಯಗೊಳಿಸುತ್ತಾ, ಪ್ರಸ್ತುತ ಅರ್ಜಿದಾರರು (ಪತಿ) ಇದರಲ್ಲಿನ ಪ್ರತಿವಾದಿಸಂಖ್ಯೆ: 2 ಆಗಿರುವ ತಮ್ಮ ಮಗಳ ಪೋಷಣೆಯನ್ನು ವಹಿಸಿಕೊಳ್ಳಲು ಸಿದ್ಧರಿದ್ದಾರೆಂದು ನಿವೇದಿಸಿಕೊಂಡರು.ಪರಿಷ್ಕರಣಾ ಅರ್ಜಿದಾರರು ಮಗುವಿನ ತಂದೆಯಾಗಿದ್ದು, ತನ್ನ ಮಗುವಿನ ಪೋಷಣೆಯನ್ನು ವಹಿಸಿಕೊಳ್ಳಲು ಸಿದ್ಧವಾಗಿರುವ ಮಾತ್ರಕ್ಕೆ, ತನ್ನನ್ನು ತಾನೆ ಪೋಷಿಸಿಕೊಳ್ಳಲು ಅಶಕ್ತಳು ಎಂಬುದಾಗಿ ರುಜುವಾತುಪಡಿಸಿರುವ, ತನ್ನ ಪತ್ನಿಗೆ ನೀಡಬೇಕಾಗಿರುವ ಜೀವನಾಂಶವನ್ನು ನೀಡುವುದನ್ನು ನಿಲ್ಲಿಸಲು ಅನುಮತಿಸಲಾದಂತೆ ಆಗುವುದಿಲ್ಲ.ಒಪ್ಪಿಕೊಂಡಿರುವಂತೆ, ಪ್ರತಿವಾದಿ ಸಂ .2 ಆಗಿರುವ ಮಗುವು

ಅಪ್ರಾಪ್ತ ವಯಸ್ಕ ಹೆಣ್ಣು ಮಗುವಾಗಿದ್ದು, ತನಗೆ ತಾನೇ ಪೋಷಿಸಿಕೊಳ್ಳಲು ಸಾಧ್ಯವಿಲ್ಲ.ತನ್ನ ಮಗಳ ಪೋಷಣೆಯನ್ನು ಮಾಡಲು ಇಚ್ಛಿಸುವುದಾಗಿ ಅರ್ಜಿದಾರನು (ತಂದೆ) ಪರಿಷ್ಕರಣಾ ಅರ್ಜಿಯಲ್ಲಿ ಹೇಳಿಕೊಂಡಾಕ್ಷಣ, ಪರಿಷ್ಕರಣಾ ಅರ್ಜಿಯಲ್ಲಿ ಪ್ರಶ್ನಿಸಿರುವ ಕುಟುಂಬ ನ್ಯಾಯಾಲಯದ ಅನುಪಾಲನೆ ಮಾಡಿ ಸದರಿ ಮಗುವಿಗೆ ಜೀವನಾಂಶ ನೀಡುವುದರಿಂದ ಆತನನ್ನು ಮಾಫಿ ಮಾಡುವುದಿಲ್ಲ.ಹಾಗಾಗಿ ಪ್ರಶ್ನಿತ ತೀರ್ಪ, ಈ ನ್ಯಾಯಾಲಯದಿಂದ ಮಧ್ಯ ಪ್ರವೇಶಿಸುವಿಕೆ ಅವಶ್ಯಕತೆಯಿರುವುದು ಯಾವುದೇ ವಿಕೃತ, ಕಾನೂನು ಬಾಹಿರತೆ ಅಥವಾ ಅಕ್ರಮದಿಂದ ಬಾಧಿತವಾಗಿದೆಯೆಂದು ಹೇಳಲು ಯಾವುದೇ ಕಾರಣಗಳಿರುವುದಿಲ್ಲ.ಅದರ ಬದಲಾಗಿ, ಕುಟುಂಬ ನ್ಯಾಯಾಲಯವು ತನ್ನ ಮುಂದೆ ಹಾಜರುಪಡಿಸಲಾದ ಅಂಶಗಳನ್ನು ವಿವೇಚನೆ ಮಾಡಿ ಮತ್ತು ಪ್ರಕರಣದ ಎಲ್ಲಾ ಪರಿಸ್ಥಿತಿಗಳನ್ನು ಹಾಗೆಯೇ ತನ್ನ ಮುಂದೆ ಇರುವ ಪತಿಯ ಹಣಕಾಸು ಸಾಮರ್ಥ್ಯ ಹಾಗೂ ಸ್ಥಿತಿಯನ್ನು ಪರಿಗಣಿಸಿ ಯುಕ್ತ ಮತ್ತು ಪರಿಗಣಿತ ಆದೇಶವನ್ನು ಹೊರಡಿಸಿದೆ.ಪ್ರಶ್ನಿತ ತೀರ್ಪಿನಲ್ಲಿ ಮಧ್ಯಪ್ರವೇಶಿಸಲು ನನಗೆ ಯಾವುದೇ ಕಾರಣಗಳು ಕಾಣುತ್ತಿಲ್ಲ.ತದನುಸಾರವಾಗಿ, ನಾನು ಈ ಮುಂದಿನ ಆದೇಶವನ್ನು ಮಾಡುತ್ತೇನೆ:

ಅರ್ಹತೆ (ಮೆರಿಟ್) ಇಲ್ಲವೆಂದು ಪರಿಷ್ಕರಣಾ ಅರ್ಜಿ ವಜಾ ಆಗಿದೆ.

ಮುಖ್ಯ ಅರ್ಜಿಯ ವಿಲೇ ಆಗಿರುವುದರಿಂದ, ಐ.ಎ.ಸಂ .1/2013 ನ್ನು ಪರಿಗಣಿಸಬೇಕಾಗಿಲ್ಲ.